# **<u>ಸಾಂಪ್ರದಾಯಿಕ ಉದ್ಯೋಗ ಸಿದ್ಧಾಂತ</u>**

ಸಾಂಪ್ರದಾಯಿಕ ಉದ್ಯೋಗ ಸಿದ್ಧಾಂತವನ್ನು ೧೯ನೇ ಶತಮಾನದಲ್ಲಿ ಇಂಗ್ಲೀಷ್ ಸಾಂಪ್ರದಾಯಿಕ ಚಿಂತಕರುಗಳು ಅಭಿವೃದ್ಧಿಪಡಿಸಿದರು. ಇದನ್ನು ನಂತರ ಮಾರ್ಷಲ್ ಮತ್ತು ಪಿಗೂರವರು ನವೀಕರಿಸಿದ್ದಾರೆ. ಶ್ರಮ ಮತ್ತು ಇತರೆ ಸಂಪನ್ಮೂಲಗಳ ಪೂರ್ಣ ಉದ್ಯೋಗ ಇರುತ್ತದೆ ಎಂಬ ಬಲವಾದ ನಂಬಿಕೆ ಸಾಂಪ್ರದಾಯಿಕ ಚಿಂತಕರುಗಳದ್ದು. ಪೂರ್ಣ ಉದ್ಯೋಗವು ಸಾಮಾನ್ಯ ಪರಿಸ್ಥಿತಿಯಾಗಿದ್ದು, ಅದರಿಂದ ವ್ಯತ್ಯಾಸವು ಕೇವಲ ತಾತ್ಕಾಲಿಕವಾಗಿರುತ್ತದೆ. ಅಂದರೆ ನಿರುದ್ಯೋಗವು ತಾತ್ಕಾಲಿಕವಾಗಿದ್ದು, ಒಂದು ಆರ್ಥಿಕತೆಯು ಯಾವತ್ತೂ ಪೂರ್ಣ ಉದ್ಯೋಗದ ಕಡೆ ಮುಖ ಮಾಡಿರುತ್ತದೆ.

ಸಾಂಪ್ರದಾಯಿಕ ಸಿದ್ಧಾಂತದ ನಂಬಿಕೆಯೆಂದರೆ, ಮುಕ್ತ ಅಥವ ಮಾರುಕಟ್ಟೆ ಆಧಾರಿತ ಅರ್ಥವ್ಯವಸ್ಥೆಯಲ್ಲಿ ಮಾರುಕಟ್ಟೆ ಚಲಕಗಳ ಸ್ವತಂತ್ರ ಬದಲಾವಣೆ ಮತ್ತು ಹೊಂದಾಣಿಕೆಗಳಿಂದ ಎಲ್ಲಾ ಸಂಪನ್ಮೂಲಗಳ ಪೂರ್ಣ ಬಳಕೆ ಉಂಟಾಗುತ್ತದೆ. ಈ ಸ್ವತಂತ್ರ ಆಚರಣೆಯಲ್ಲಿ ಏನಾದರೂ ಹಸ್ತಕ್ಷೇಪ ಉಂಟಾದಲ್ಲಿ ಪೂರ್ಣ ಉದ್ಯೋಗಕ್ಕೆ ದಕ್ಕೆ ಉಂಟಾಗುತ್ತದೆ. ಈ ಪೂರ್ಣ ಉದ್ಯೋಗ ಸಿದ್ಧಾಂತವನ್ನು ''ಸೇನ ಮಾರುಕಟ್ಟೆಗಳ ನಿಯಮವೆಂಬ ಆಧಾರ ಸ್ತಂಭದ ಮೇಲೆ ರಚಿಸಲಾಗಿದೆ''.

ಸೇನ ಮಾರುಕಟ್ಟೆಗಳ ನಿಯಮವು ಒಂದು ಅರ್ಥ ವ್ಯವಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದರ ನಿಜವಾದ ವಿವರಣೆಯಾಗಿದೆ. ಅದರ ಪ್ರಕಾರ ''ನೀಡಿಕೆಯು ತನ್ನ ಬೇಡಿಕೆಯನ್ನು ತಾನೇ ಸೃಷ್ಠಿಸಿ ಕೊಳ್ಳುತ್ತದೆ''. (Supply creates its own demand) ಅಂದರೆ ಉತ್ಪಾದನೆ ಪ್ರಕ್ರಿಯೆ ತನ್ನ ಜೊತೆಯಲ್ಲಿಯೇ ಆದಾಯವನ್ನು ಸೃಷ್ಠಿಸಿ ಅದು ವೆಚ್ಚಕ್ಕೆ ಪ್ರೇರಣೆಯಾಗುತ್ತದೆ. ಆದುದರಿಂದ ಮಾರುಕಟ್ಟೆಗೆ ಎಷ್ಟು ವಸ್ತುಗಳ ಪೂರೈಕೆಯಾಗುತ್ತದೋ ಅಷ್ಟೇ ಪ್ರಮಾನದ ಬೇಡಿಕೆಯು ಸೃಷ್ಠಿಯಾಗಯತ್ತದೆ. ಈ ರೀತಿ ಒಟ್ಟಾರೆ ಪೂರೈಕೆ ಒಟ್ಟಾರೆ ಬೇಡಿಕೆಗೆ ಸಮಾನವಾಗಿ, ಆದಾಯ ಮತ್ತು ಉತ್ಪನ್ನಗಳು ಪೂರ್ಣ ಉದ್ಯೋಗ ಮಟ್ಟದಲ್ಲಿರುತ್ತದೆ.

ತನ್ನ "Treatise on political economy" ಗ್ರಂಥದಲ್ಲಿ ಸೇ ಹೇಳುವುದೇನೆಂದರೆ ''ಒಂದು ವಸ್ತುವು ತಾನು ಉತ್ಪಾದನೆಯಾದ ಕೂಡಲೇ ಅದರ ಪೂರ್ಣ ಮೌಲ್ಯದಷ್ಟು ಬೇರೆ ವಸ್ತುಗಳಿಗೆ ಬೇಡಿಕೆ ಉಂಟುಮಾಡುತ್ತದೆ: ಉತ್ಪಾದಕನು ಒಂದು ವಸ್ತುವನ್ನು ಉತ್ಪಾದಿಸಿದ ತಕ್ಷಣ ಅದನ್ನು ಮಾರಾಟ ಮಾಡುವ ತವಕದಲ್ಲಿರುತ್ತಾನೆ. ವಸ್ತುವಾಗಲಿ ಅಥವ ಅದರಿಂದ ಬರುವ ಹಣವಾಗಲಿ ಹೆಚ್ಚು ಕಾಲವಿದ್ದಷ್ಟು ನಷ್ಟ ಅನುಭವಿಸುತ್ತಾನೆ, ಏಕೆಂದರೆ ಹಣದ ಮೌಲ್ಯವೂ ಸಹ ಕ್ಷೀಣಿಸುತ್ತದೆ''. ಇದನ್ನೇ ಸಂಕ್ಷಿ ಪ್ತವಾಗಿ ನೀಡಿಕೆ ತನ್ನ ಬೇಡಿಕೆಯನ್ನು ತಾನೇ ಸೃಷ್ಠಿಸಿ ಕೊಳ್ಳುತ್ತದೆ ಎಂದು ಹೇಳಲಾಗಿದೆ.

ಈ ಮೇಲಿನ ವಿಶ್ಲೇಷಣೆಯ ಆಧಾರದ ಮೇಲೆ ಅರ್ಥ ವ್ಯವಸ್ಥೆಯಲ್ಲಿ ಸಾಮಾನ್ಯ ಹೆಚ್ಚುವರಿ ಉತ್ಪಾದನೆಯಾಗಲಿ ಮತ್ತು ಸಾಮಾನ್ಯ ನಿರುದ್ಯೋಗವಾಗಲಿ ಇರುವುದಿಲ್ಲವೆಂಬುದು ಸಾಂಪ್ರದಾಯಿಕ ಉದ್ಯೋಗ ಸಿದ್ಧಾಂತದ ಮುಖ್ಯ ಸಾರಾಂಶ.

## <u>ಸಾಂಪ್ರದಾಯಿಕ ಉದ್ಯೋಗ ಸಿದ್ಧಾಂತದ ದೋಷಗಳು:</u>

ಸಾಂಪ್ರದಾಯಿಕ ಉದ್ಯೋಗ ಸಿದ್ಧಾಂತವನ್ನು ಕೇನ್ಸರವರು ಕಟುವಾಗಿ ಟೀಕಿಸಿದ್ದಾರೆ. ೧೯೩೦ ರಲ್ಲಿ ಸಂಭವಿಸಿದ ಮಹಾ ಆರ್ಥಿಕ ಮುಗ್ಗಟ್ಟು ಸೇನ ಮಾರುಕಟ್ಟೆ ನಿಯಮಕ್ಕೆ ಮತ್ತು ಸಾಂಪ್ರದಾಯಿಕ ಚಿಂತನೆಗಳಿಗೆ ದೊಡ್ಡ ಪೆಟ್ಟಾಯಿತು. ಸಾಂಪ್ರದಾಯಿಕ ಪಂಥದ ಕೆಲವು ದೋಷಗಳೆಂದರೆ:

೧. ಪೂರ್ಣ ಉದ್ಯೋಗವು ಅವಾಸ್ತವಿಕ ಕಲ್ಪನೆ. ಸಮಗ್ರ ಬೇಡಿಕೆ ಮತ್ತು ಸಮಗ್ರ ಪೂರೈಕೆ ಸಮತೋಲಿನ ಸ್ಥಿತಿಯಲ್ಲೂ ಆರ್ಥಿಕತೆಯಲ್ಲಿ ಪೂರ್ಣ ಉದ್ಯೋಗವು ಇರುವುದಿಲ್ಲ. ಒಂದು ನಿರ್ಧಿಷ್ಟ ಸಂಖ್ಯೆಯಲ್ಲಿ ನಿರುದ್ಯೋಗವು ಇದ್ದೇ ಇರುತ್ತದೆ (Frictional unemployment).

೨. ಸೇನೆ ಮಾರುಕಟ್ಟೆ ನಿಯಮವು ಊರ್ಜಿತವಲ್ಲ, ಉಳಿತಾಯದ ಮೂಲಕ ಬೇಡಿಕೆಯ ಕೊರತೆ ಇರುತ್ತದೆ.

೩. ಕೂಲಿ ಬೆಲೆಗಳು ಯಾವಾಗಲೂ ಸಡಿಲತೆ ಹೊಂದಿರುವುದಿಲ್ಲಾ, ಅದರಲ್ಲೂ ಕೂಲಿಯು ಕೆಳಮುಖವಾಗಿ ಇಳಿಯುವುದಿಲ್ಲಾ (rigid downward).

೪. ಕೂಲಿ ಕಡಿತ ನಿರುದ್ಯೋಗ ನಿವಾರಣೆಗೆ ಸಮರ್ಥನೀಯವಲ್ಲ.

೫. ಅರ್ಥಹೀನ ದೀರ್ಘಾವದಿ ಸಮತೋಲನದ ವಿವರಣೆ ಸರಿಯಲ್ಲ. ಕೇನ್ಸ ಪ್ರಕಾರ ದೀರ್ಘಾವದಿಯಲ್ಲಿ ಎಲ್ಲರೂ ಸತ್ತಿರುತ್ತಾರೆ.

೬. ಉಳಿತಾಯ ಹೂಟೆ ಸಮಾನತೆ ಮತ್ತು ಅದು ಬಡ್ಡಿದರದಿಂದ ಉಂಟಾಗುತ್ತದೆ ಎಂಬುದು ತಪ್ಪು. ಕೇನ್ಸ ಪ್ರಕಾರ ಹೂಟೆಯು ಲಾಭದ ದರ ಅಥವ ಭವಿಷ್ಯ ಊಹೆಗಳಿಂದ ನಿರ್ಧಾರವಾಗುತ್ತದೆ, ಕೇವಲ ಬಡ್ಡಿದರದಿಂದ ಅಲ್ಲ.

# ಕೂಲಿ–ಬೆಲೆ ಸಡಿಲತೆ ಮತ್ತು ಉದ್ಯೋಗ

ಸೇ ಮಾರುಕಟ್ಟೆ ನಿಯಮದ ಆಧಾರದ ಮೇಲೆ ರಚಿತವಾದ ಸಾಂಪ್ರದಾಯಿಕ ಉದ್ಯೋಗ ಸಿದ್ಧಾಂತವನ್ನು ಎ.ಸಿ.ಪಿಗೂ ಪರಿಷ್ಕರಿಸಿದ್ದಾರೆ. ಪಿಗೂರವರ ಪ್ರಕಾರ ಕೂಲಿ ಅಥವಾ ವೇತನವನ್ನು ಕಡಿತ ಮಾಡುವ ಮೂಲಕ ಉದ್ಯೋಗವನ್ನು ಹೆಚ್ಚಿಸಬಹುದಾಗಿದೆ. ಪರಿಪೂರ್ಣ ಅರ್ಥ ವ್ಯವಸ್ಥೆಯಲ್ಲಿ ಕೂಲಿ–ಬೆಲೆಗಳ ಸಡಿಲತೆಯಿಂದ ಪೂರ್ಣ ಉದ್ಯೋಗವನ್ನು ಸ್ಥಾಪಿಸಬಹುದಾಗಿದೆ.

ಪಿಗೂರವರ ಅಭಿಪ್ರಾಯದಂತೆ, ಸರ್ಕಾರದ ಹಸ್ತಕ್ಷೇಪವನ್ನು ಇಲ್ಲವಾಗಿಸಿ ಬೇಡಿಕೆ ಮತ್ತು ಪೂರೈಕೆ ಆಧಾರದ ಮೇಲೆ ಕೂಲಿ ದರ ನಿಗಧಿ ಮಾಡಬೇಕು. ಬೇಡಿಕೆ ಮತ್ತು ಪೂರೈಕೆ ಆಧಾರದ ಮೇಲೆ ನಿರ್ಧಾರವಾಗುವ ಕೂಲಿದರದಲ್ಲಿ ಉದ್ಯೋಗ ಮಾಡಲು ಇಚ್ಛಿಸಿದ ಎಲ್ಲರಿಗೂ ಉದ್ಯೋಗ ದೊರಕುತ್ತದೆ. ಅರ್ಥ ವ್ಯವಸ್ಥೆಯಲ್ಲಿ ನಿರುದ್ಯೋಗವು ಇದ್ದಲ್ಲಿ, ಕೂಲಿ ಕಡಿತ ಮಾಡುವುದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ. ವೆಚ್ಚ ಕಡಿಮೆಯಾದಾಗ ಬೆಲೆಯು ಕಡಿಮೆಯಾಗುತ್ತೆ. ಬೆಲೆಯು ಇಳಿಕೆಯಾದಾಗ ವಸ್ತುಗಳ ಬೇಡಿಕೆಯು ಅಧಿಕವಾಗುತ್ತದೆ. ಉತ್ಪಾದನೆಗೆ ನಂತರ ಕಾರ್ಮಿಕರ ಬೇಡಿಕೆ ಹೆಚ್ಚಾಗಿ ನಿರುದ್ಯೋಗಿಗಳೆಲ್ಲರೂ ಉದ್ಯೋಗದಲ್ಲಿ ನಿರತರಾಗುತ್ತಾರೆ.

“ಪರಿಪೂರ್ಣವಾದ ಮುಕ್ತ ಸ್ಪರ್ಧೆಯಲ್ಲಿ_ ಪ್ರತಿಯೊಬ್ಬರೂ ಉದ್ಯೋಗಕ್ಕೆ ನೇಮಕಗೊಳ್ಳುವ ರೀತಿಯಲ್ಲಿ ವೇತನ ದರಗಳು ಬೇಡಿಕೆಯೊಡನೆ ಸಂಬಂಧ ಹೊಂದುವ ಬಲವಾದ ಪ್ರವೃತ್ತಿಯು ಯಾವಾಗಲೂ ಕಾರ್ಯಚರಣೆಯಲ್ಲಿರುತ್ತದೆ”.

ಹಣರೂಪಿ ವೇತನ ದರಗಳ ಬದಲಾವಣೆಗಳು ನೈಜ ವೇತನಗಳೊಂದಿಗೆ (Real wages) ನೇರವಾದ ಮತ್ತು ಪ್ರಮಾಣಾನುಗುಣವಾದ ಸಂಬಂಧವನ್ನು ಹೊಂದಿರುತ್ತವೆ. ಬೆಲೆಗಳು ಇಳಿಕೆಯಾದಾಗ ಹಿಂದಿನ ಉಳಿತಾಯಗಳ ಮೂಲಕ ಹಣದ ಬಾಕಿಯನ್ನು ಹೊಂದಿರುವವರು ಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ಇದರಿಂದ ಬೇಡಿಕೆಯು ಹೆಚ್ಚಾಗುವುದನ್ನು ಹಣದ ಬಾಕಿ ಪರಿಣಾಮ (cash-balance effect) ಅಥವಾ ಪಿಗೂ ಪರಿಣಾಮ ಎನ್ನುವರು (Pigou Effect).

ಪಿಗೊ ಅವರ ಮೇರೆಗೆ ಸರ್ಕಾರವು ಕನಿಷ್ಠವೇತನ ನೀತಿಯನ್ನು ಜಾರಿಗೆ ತಂದು ಆರ್ಥಿಕ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುವುದರಿಂದ ಅನೈಚಿಕ ನಿರುದ್ಯೋಗವು ಅಸ್ತಿತ್ವದಲ್ಲಿರುತ್ತದೆ. ಈ ರೀತಿಯ ಹಸ್ತಕ್ಷೇಪ ಇಲ್ಲದಿದ್ದಲ್ಲಿ ಪರಿಪೂರ್ಣ ಪೈಪೋಟಿಯ ಮೂಲಕ ಎಲ್ಲರಿಗೂ ಉದ್ಯೋಗ ಲಭ್ಯವಾಗುತ್ತದೆ.

ಆರ್ಥಿಕ ಮುಗ್ಗಟ್ಟಿನ ಸಂದರ್ಭದಲ್ಲಿ ಕೂಲಿ ಕಡಿತ ಮಾಡುವುದರಿಂದ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ. ಉದಾ: ಒಂದು ಉತ್ಪಾದಕ ಘಟಕದಲ್ಲಿ ೧೦,೦೦೦ ರೂಗಳನ್ನು ಕೂಲಿ ನೀಡಿ ೧ ಲಕ್ಷ ರೂಗಳ ಕೂಲಿ ನಿಧಿಯಿಂದ ೧೦ ಜನ ಕಾರ್ಮಿಕರನ್ನು ಉದ್ಯೋಗಕ್ಕೆ ತೆಗೆದು ಕೊಳ್ಳಬಹುದು. ನಿರುದ್ಯೋಗವಿದ್ದಾಗ ಕೂಲಿಯನ್ನು ೫೦೦೦ ರೂಗಳಿಗೆ ಇಳಿಸಿದಾಗ ೨೦ ಜನರಿಗೆ ಅಷ್ಟೇ ಕೂಲಿ ನಿಧಿಯಲ್ಲಿ ಉದ್ಯೋಗ ನೀಡಬಹುದಾಗಿದೆ. ಈ ರೀತಿಯ ಕೂಲಿ ಕಡಿತದಿಂದ ಒಂದು ಘಟಕದಲ್ಲಿ ಮಾತ್ರ ಉದ್ಯೋಗವನ್ನು ಹೆಚ್ಚಿಸ ಬಹುದಾದರೂ, ಇಡೀ ಆರ್ಥಿಕತೆಯಲ್ಲಿ ಎಲ್ಲಾ ಘಟಕಗಳ ಕೂಲಿ ಕಡಿತದಿಂದ ಸಮಗ್ರವಾಗಿ ಉದ್ಯೋಗಗಳು ಹೆಚ್ಚಾಗುವುದಿಲ್ಲಾ ಬದಲಾಗಿ ಸಮಗ್ರ ಕೂಲಿ ಕಡಿತದಿಂದ ಒಟ್ಟು ಆಧಾಯವು ಕಡಿಮೆಯಾಗಿ ಸಮಗ್ರ ಬೇಡಿಕೆಯು ಕುಸಿದು ನಿರುದ್ಯೋಗವು ಇನ್ನೂ ಹೆಚ್ಚಾಗುತ್ತದೆ. ಜೊತೆಗೆ ಬೆಲೆಗಳು ಕಡಿಮೆಯಾದಾಗ ತಕ್ಷಣ ಜನರು ಹೆಚ್ಚಿಗೆ ಕೊಳ್ಳುವುದನ್ನು ಮುಂದೂಡಿದಾಗ ಪಿಗೂ ಪರಿಣಾಮ ಉಂಟಾಗುವುದಿಲ್ಲ.

# **ಕೇನ್ಸನ ಉದ್ಯೋಗ ಸಿದ್ಧಾಂತ:**

ಪೀಠಿಕೆ: ಅವಾಸ್ತವಿಕ ಸಾಂಪ್ರದಾಯಿಕ ಉದ್ಯೋಗವನ್ನು ತೀವ್ರವಾಗಿ ಟೀಕಿಸುವುದರ ಜೊತೆಗೆ ತನ್ನದೇ ಆದ ವ್ಯವಸ್ಥಿತ ಉದ್ಯೋಗ ಸಿದ್ಧಾಂತವನ್ನು ಜೆ.ಎಮ್.ಕೇನ್ಸ ನೀಡಿದ್ದಾರೆ. ೧೯೩೬ ರಲ್ಲಿ ಪ್ರಕಟಿಸಿದ ಕೇನ್ಸರ "The general theory of Employment, Interest, and money" ಗ್ರಂಥವು ಒಂದು ಹೊಸ ಕ್ರಾಂತಿಯನ್ನೇ ಉಂಟುಮಾಡಿತು. ಇದರ ಪರಿಣಾಮವಾಗಿ ಆರ್ಥಿಕ ಚಿಂತನೆ ಮತ್ತು ಆರ್ಥಿಕ ನೀತಿಗಳಲ್ಲಾದ ಮಹತ್ತರ ಬದಲಾವಣೆಗಳನ್ನು 'ಕೇನ್ಸನ ಕ್ರಾಂತಿ' ಎಂದೇ ಗುರುತಿಸಲಾಗಿದೆ.

೧೯೩೦ರ ಮಹಾ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಲು ಕೇನ್ಸನು ಸರ್ಕಾರದ ಹಸ್ತಕ್ಷೇಪ, ಕೊರತೆ, ಹಣಕಾಸು, ಅಗ್ಗದ ಹಣದ ನೀತಿ, ಮುಂತಾದ ದಿಟ್ಟ ಕ್ರಮಗಳನ್ನು ಸೂಚಿಸಿದ್ದಾರೆ.

ಕೇನ್ಸನ ಉದ್ಯೋಗ ಸಿದ್ಧಾಂತವು ಅಲ್ಪಾವಧಿ ಸಮತೋಲನ ಸಿದ್ಧಾಂತವಾಗಿದೆ. ಸಾಂಪ್ರದಾಯಿಕ ಪೂರ್ಣ ಉದ್ಯೋಗ ಸಿದ್ಧಾಂತಕ್ಕೆ ವಿರುದ್ದವಾಗಿ ಬೇಡಿಕೆಯ ಕೊರತೆಯನ್ನು ಪರಿಗಣಿಸಿರುವುದರಿಂದ, ಬೇಡಿಕೆಯ ಕೊರತೆ ಸಿದ್ಧಾಂತವೆಂದು ಪರಿಗಣಿಸಲಾಗಿದೆ. ಸಮಗ್ರ ಬೇಡಿಕೆ ಮತ್ತು ಸಮಗ್ರ ಪೂರೈಕೆಗಳು ಸಮತೋಲನ ಹೊಂದಿದರೂ ಅರ್ಥ ವ್ಯವಸ್ಥೆಯಲ್ಲಿ ಪೂರ್ಣ ಉದ್ಯೋಗ ಸಾದ್ಯವಿಲ್ಲ. ಅನೇಕ ಕಾರಣಗಳಿಂದಾಗಿ ಒಂದು ನಿರ್ದಿಷ್ಟ ಸಂಖ್ಯೆಯ ಜನರು ನಿರುದ್ಯೋಗದಲ್ಲಿ ಇದ್ದೆ ಇರುತ್ತಾರೆ ಎಂಬುದು ಕೇನ್ಸರ ವಾದ. ಆದುದರಿಂದ ಕೇನ್ಸನದು ಅರೆಉದ್ಯೋಗ ಸಮತೋಲನ ಸಿದ್ಧಾಂತ (under employment equilibrium theory).

ಕೇನ್ಸರ ಸಿದ್ಧಾಂತದ ಪ್ರಕಾರ ಉದ್ಯೋಗ ಮಟ್ಟವು ಯಾವಾಗಲೂ ಪರಿಣಾಮಕಾರಿ ಬೇಡಿಕೆ ಮಟ್ಟವನ್ನು ಅವಲಂಬಿಸಿರುತ್ತದೆ. ಒಂದು ನಿರ್ದಿಷ್ಟ ಅವಧಿಯಲ್ಲಿ O=Y=N=ED ಸಮವಾಗಿರುತ್ತದೆಂದು ಕೇನ್ಸ ವಿವರಿಸಿದ್ದಾನೆ. ಪರಿಣಾಮಕಾರಿ ಬೇಡಿಕೆಯು ಸರಕುಗಳನ್ನು ಮತ್ತು ಸೇವೆಗಳನ್ನು ಕೂಳ್ಳುವ ಶಕ್ತಿ ಮತ್ತು ಕೊಳ್ಳುವ ಮನಸ್ಸು ಇದು ಸಮಗ್ರವಾಗಿ ಇಡೀ ಸಮುದಾಯ ಒಟ್ಟಾರೆ ವಸ್ತು ಮತ್ತು ಸೇವೆಗಳ ಮೆಲೆ ಮಾಡುವ ಒಟ್ಟಾರೆ ವೆಚ್ಚವಾಗಿದೆ.

ಪರಿಣಾಮಕಾರಿ ಬೇಡಿಕೆಯು ಅರ್ಥ ವ್ಯವಸ್ಥೆಯಲ್ಲಿ ಉದ್ಯೋಗ ಉತ್ಪಾದನೆ, ಹೂಡಿಕೆ, ಆದಾಯ ಲಾಭಗಳನ್ನು ನಿರ್ಧರಿಸುವ ಮುಖ್ಯ ಅಂಶವಾಗಿದೆ. ಪರಿಣಾಮಕಾರಿ ಬೇಡಿಕೆಯು ಹೆಚ್ಚಳವು ಉದ್ಯೋಗ ಮತ್ತು ಆದಾಯದ ಮಟ್ಟವನ್ನು ಹೆಚ್ಚಿಸುತ್ತದೆ. ಪರಿಣಾಮಕಾರಿ ಬೇಡಿಕೆಯ ಕೊರತೆಯು ಆದಾಯ ಮತ್ತು ಉದ್ಯೋಗ ಮಟ್ಟವನ್ನು ತಗ್ಗಿಸುತ್ತದೆ.

ಒಟ್ಟು ಉತ್ಪನ್ನ = ಒಟ್ಟು ಆದಾಯ = ಉದ್ಯೋಗ = ಪರಿಣಾಮಕಾರಿ ಬೇಡಿಕೆಯ ಮಟ್ಟ

ಸಮಗ್ರ ಬೇಡಿಕೆ ಸಮಗ್ರ ಪೂರೈಕೆ

ಅನುಭೋಗ ಹೂಡಿಕೆ ಸರ್ಕಾರಿ ವೆಚ್ಚ

ಆದಾಯದ ಗಾತ್ರ ಅನುಭೋಗ ಪ್ರವೃತ್ತಿ

ಬಡ್ಡಿಯ ದರ ಬಂಡವಾಳದ ಸೀಮಾಂತ ದಕ್ಷತೆ

ದ್ರವ್ಯದೊಲವು ಹಣದ ಪೂರೈಕೆ ಬಂಡವಾಳದ ಪೂರ್ಯಕೆಯ ಬೆಲೆ ಲಾಭದ ನಿರೀಕ್ಷಿತ ದರ

ವ್ಯವಾರದ ಉದ್ದೇಶ ಮುನ್ನೆಚ್ಚರಿಕೆಯ ಉದ್ದೇಶ ಸಟ್ಟಾ ವ್ಯಾಪಾರದ ಉದ್ದೇಶ

## **ಪರಿಣಾಮಕಾರಿ ಬೇಡಿಕೆಯುನ್ನು ನಿರ್ಧರಿಸುವ ಅಂಶಗಳು:**

ಪರಿಣಾಮಕಾರಿ ಬೇಡಿಕೆಯನ್ನು ಪ್ರಧಾನವಾಗಿ ಎರಡು ಅಂಶಗಳು ನಿರ್ಧರಿಸುತ್ತವೆ. ಅವು: ಸಮಗ್ರ ಪೂರೈಕೆ ಕಾರ್ಯಕಾರಿಣಿ (Aggregate supply Function) , ಮತ್ತು ಸಮಗ್ರ ಬೇಡಿಕೆಯ ಕಾರ್ಯಕಾರಿಣಿ (Aggregate demand function).

ಸಮಗ್ರ ಪೂರೈಕೆ ಕಾರ್ಯಕಾರಿಣಿ: ಉದ್ಯಮಿಗಳು ಲಾಭದ ದೃಷ್ಟಿಯಿಂದ ಉತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ. ತಾವು ಎಷ್ಟು ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡರೆ ನಿರೀಕ್ಷಿತ ಲಾಭ ಬರುತ್ತದೆಯೋ ಅಷ್ಟು ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಉದ್ಯಮಿಗಳು ಕಾರ್ಮಿಕರನ್ನು ನೇಮಿಸಿಕೊಳ್ಳಬೇಕಾದರೆ ಕೊನೆಯ ಪಕ್ಷ ಕನಿಷ್ಠ ಮಟ್ಟದ ಬೆಲೆ ಅಥವಾ ವರಮಾನದ ಅವಶ್ಯಕತೆ ಇರುತ್ತದೆ. ಅಂದರೆ ಕನಿಷ್ಠ ಮಟ್ಟದ ಬೆಲೆ ಅಥವ ವರಮಾನದ ಭರವಸೆ ಇದ್ದರೆ ಮಾತ್ರ ಉದ್ಯಮಿಗಳು ಕಾಮಿಕರನ್ನು ನೇಮಿಸಲು ಪ್ರಚೋದಿತರಾಗುತ್ತಾರೆ. ಉದ್ಯಮಿಗಳನ್ನು ಪ್ರಚೋದಿಸಿ ನಿರ್ದಿಷ್ಟ ಉದ್ಯೋಗವನ್ನು ಕೊಡುವ ಕನಿಷ್ಠ ಬೆಲೆಗೆ 'ಸಮಗ್ರ ನೀಡಿಕೆಯ ಕಾರ್ಯಕಾರಿಣಿ' ಎನ್ನಲಾಗಿದೆ. ಅಂದರೆ ಒಂದು ದೇಶದ ಎಲ್ಲ ಉದ್ಯಮಿಗಳು, ವಿವಿಧ ಉದ್ಯೋಗ ಮಟ್ಟಗಳಲ್ಲಿ, ತಮ್ಮ ಉತ್ಪನ್ನಗಳ ಮಾರಟದಿಂದ ಪಡೆಯಲೇ ಬೇಕಾದ ವರಮಾನ ಮೊತ್ತಗಳ ಒಂದು ಪಟ್ಟಿಯೇ 'ಸಮಗ್ರ ನೀಡಿಕೆಯ ಕಾರ್ಯಕಾರಿಣಿ' ಎನ್ನಿಸಿಕೊಳ್ಳುತ್ತದೆ. ಉದ್ಯಮಿಗಳಿಗೆ ವರಮಾನ ಮೊತ್ತವು ಹೆಚ್ಚುತ್ತಿದ್ದರೆ ಅವರು ಇನ್ನೂ ಹೆಚ್ಚು ಹೆಚ್ಚು ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿ ಕೊಳ್ಳುತ್ತಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮಗ್ರ ನೀಡಿಕೆಯ ಕಾರ್ಯಕಾರಿಣಿಯು ಉದ್ಯಮಿಗಳ ವೆಚ್ಚವನ್ನು ತೋರಿಸುತ್ತದೆ.

**ಸಮಗ್ರ ಬೇಡಿಕೆಯ ಕಾರ್ಯಕಾರಿಣಿ (ADF):** ಸಮಗ್ರ ಬೇಡಿಕೆಯ ಕಾರ್ಯಕಾರಿಣಿ ಎಂದರೆ ಒಂದು ರಾಷ್ಟ್ರದ 'ಎಲ್ಲ ಉದ್ಯಮಗಳು ವಿವಿಧ ಉದ್ಯೋಗ ಮಟ್ಟಗಳಲ್ಲಿ ತಮ್ಮ ಉತ್ಪನ್ನಗಳ ಮಾರಾಟದಿಂದ ನಿರೀಕ್ಷಿಸುವ ವರಮಾನದ ಮೊತ್ತಗಳ ಪಟ್ಟಿ' ಎಂದು ಹೇಳಬಹುದು. ಉದ್ಯಮಿಗಳು ಹೆಚ್ಚು ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿದರೆ ಅವರ ಒಟ್ಟು ಉತ್ಪನ್ನವು ಅಧಿಕಗೊಂಡು, ವರಮಾನವು ಅಧಿಕಗೊಳ್ಳುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಉದ್ಯೋಗ ಹೆಚ್ಚಾದಂತೆ ಸಮಗ್ರ ಬೇಡಿಕೆಯ ಬೆಲೆಯೂ ಏರುತ್ತ ಹೋಗುತ್ತದೆ, ಉದ್ಯೋಗ ಕಡಮೆಯಾದಂತೆ ಸಮಗ್ರ ಬೇಡಿಕೆಯ ಬೆಲೆಯು ಕಡಮೆಯಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಸಮಗ್ರ ಬೇಡಿಕೆಯ ಕಾರ್ಯಕಾರಿಣಿಯು ಉದ್ಯಮಿಗಳ ಆದಾಯವನ್ನು ವ್ಯಕ್ತಪಡಿಸುತ್ತೆ.

**ಸಮತೋಲನ ಮಟ್ಟ ಉದ್ಯೋಗ ನಿರ್ಧಾರ:**

ಸಮಗ್ರ ಬೇಡಿಕೆಯ ಕಾರ್ಯಕಾರಿಣಿ ಮತ್ತು ಸಮಗ್ರ ನೀಡಿಕೆಯ ಕಾರ್ಯಕಾರಿಣಿ ಸಹಾಯದಿಂದ ಕ್ರಮವಾಗಿ ಸಮಗ್ರ ಬೇಡಿಕೆಯ ರೇಖೆ ಮತ್ತು ಸಮಗ್ರ ನೀಡಿಕೆಯ ರೇಖೆಗಳನ್ನು ರಚಿಸಿಕೊಳ್ಳಬಹುದು. ಸಮಗ್ರ ಬೇಡಿಕೆಯ ರೇಖೆ ಮತ್ತು ಸಮಗ್ರ ನೀಡಿಕೆಯ ರೇಖೆಗಳು ಪರಸ್ಪರ ಛೇದಿಸುವ ಬಿಂದುವಿನಲ್ಲಿ ಪರಿಣಾಮಕಾರಿ ಬೇಡಿಯು ನಿರ್ಧಾರವಾಗುತ್ತದೆ. ಎಲ್ಲಿಯವರೆಗೆ ಈ ಎರಡು ರೇಖೆಗಳು ಪರಸ್ಪರ ಸಮನಾಗಿರುತ್ತದೆಯೋ ಅಲ್ಲಿಯವರೆಗೆ ಉದ್ಯಮಿಗಳು ಉತ್ಪಾದನಾ ಚಟುವಟಿಕೆಗಳನ್ನು ಮುಂದುವರಿಸುತ್ತಾರೆ. ಒಂದು ವೇಳೆ ಉದ್ಯಮಿಗಳ ವರಮಾನವು ಅಧಿಕವಾಗಿದ್ದು ವೆಚ್ಚ ಕಡಮೆಯಾದರೆ ಅವರು ತಮ್ಮ ಉತ್ಪಾದನಾ ಕಾರ್ಯವನ್ನು ಮುಂದುವರೆಸುವುದರಲ್ಲಿ ಸಂದೇಹವಿಲ್ಲ. ಆಗ ಇನ್ನೂ ಹೆಚ್ಚು ಜನರಿಗೆ ಉದ್ಯೋಗವಕಾಶಗಳು ದೊರೆಯುತ್ತವೆ. ಇದಕ್ಕೆ ಬದಲಾಗಿ, ವರಮಾನ ಕಡಮೆಯಾಗಿ ವೆಚ್ಚ ಹೆಚ್ಚಾದರೆ ಉದ್ಯಮಿಗಳು ಉತ್ಪಾದನಾ ಪ್ರಮಾಣವನ್ನು ಕಡಮೆ ಮಾಡಲೇಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಉದ್ಯೋಗವಕಾಶಗಳೂ ಕಡಮೆಯಾಗುತ್ತದೆ. ಆದುದರಿಂದ ಉತ್ಪಾದನಾ ಕಾರ್ಯವು ಈ ಎರಡು ಕಾರ್ಯಕಾರಿಣಿಗಳು ಸಮನಾಗುವವರೆಗೂ ಮುಂದುವರೆಯುತ್ತದೆ. ಯಾವಾಗ ಅವೆರಡು ಸಮನಾಗಿರುತ್ತದೆಯೋ ಆಗ ಉದ್ಯೋಗ ಮಟ್ಟವು ಸ್ಥಿರವಾಗಿ ನೆಲಸುತ್ತದೆ.

## ಕೇನ್ಸನ ಸಿದ್ಧಾಂತದ ಟೀಕೆಗಳು

ನಿರುದ್ಯೋಗದ ಬಗ್ಗೆ ನಿರೂಪಣೆ ಸಾಲದು: ನಿರುದ್ಯೋಗ ನಿವಾರಣೆಗೆ ಕೇನ್ಸ ನೀಡಿರುವ ನಿರೂಪಣೆ ತೃಪ್ತಿಕರವಾಗಿಲ್ಲ. ನಿರುದ್ಯೋಗವು ಕೇವಲ ಋತುಮಾನಕ್ಕೆ (seasonal) ಮಾತ್ರ ಸೀಮಿತವಾಗಿಲ್ಲ; ಅದು ಕಾರ್ಲ್ ಮಾರ್ಕ್ಸ್ ಹೇಳಿರುವಂತೆ, ತಾಂತ್ರಿಕ ಜ್ಞಾನದ ಬಳಕೆಯಿಂದಲೂ ತಲೆದೋರುತ್ತದೆ. ಇಂತಹ ನಿರುದ್ಯೋಗದ ನಿವಾರಣೆಗೆ ಕೇನ್ಸ್ ಯಾವ ಸಲಹೆಯನ್ನೂ ನೀಡಿಲ್ಲವೆಂದು ಪಾಲ್ ಸ್ವೀಜಿ ಆಕ್ಷೇಪಿಸಿದ್ದಾರೆ.

**ಕೇನ್ಸನ ಸಿದ್ಧಾಂತವು ಆರ್ಥಿಕತೆಯನ್ನಾದರಿಸಿದೆ:** ಒಂದು ದೇಶದ ಉದ್ಯೋಗ ಮತ್ತು ವರಮಾನದ ಮೇಲೆ ಮಹತ್ವದ ಪರಿಣಾಮವನ್ನು ಬೀರುವಂತಹ ಆಮದು – ರಫ್ತುಗಳನ್ನು ಕೇನ್ಸ್ ಗಣನೆಗೆ ತೆಗೆದುಕೊಳ್ಳದಿರುವುದು ಒಂದು ಅಪರಾಧವೇ ಸರಿ ಎಂಬುದಾಗಿ ಟೀಕಿಸಲಾಗಿದೆ.

**ಮುಗ್ಗಟ್ಟಿನ ಅರ್ಥಶಾಸ್ತ್ರ:** ಕೇನ್ಸನ ಅರ್ಥಶಾಸ್ತ್ರವನ್ನು ಮುಗ್ಗಟ್ಟಿನ ಅರ್ಥಶಾಸ್ತ್ರವೆಂದು ಪರಿಗಣಿಸಲಾಗಿದೆ. ಬೆಲೆ ಏರಿಕೆಯ ಸನ್ನಿವೇಶಗಳಿಗೆ ಅನ್ವಯಿಸುವುದಿಲ್ಲ.

**ಬಂಡವಾಳಶಾಹಿ ವ್ಯವಸ್ಥೆ:** ಕೇನ್ಸನ ಅರ್ಥಶಾಸ್ತ್ರವು ಕೇವಲ ಬಂಡವಾಳಶಾಹಿ ಸಮಾಜಗಳಿಗೆ ಸೀಮಿತವಾಗಿದೆ.

**ಅನಭಿವೃದ್ಧ ರಾಷ್ಟ್ರಗಳಿಗೆ ಅನ್ವಯಿಸುವುದಿಲ್ಲ:** ಕೇನ್ಸನ ಅರ್ಥಶಾಸ್ತ್ರವು ಬಹುವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಅನ್ವಯಿಸುತ್ತದೆಯೇ ವಿನಾ ಅನಭಿವೃದ್ಧ ರಾಷ್ಟ್ರಗಳಿಗಲ್ಲ. ಕೇನ್ಸನ ಪ್ರಕಾರ ಮುಂದುವರಿದ ಸಮಾಜಗಳಲ್ಲಿ ಪರಿಣಾಮಕಾರಿ ಬೇಡಿಕೆಯು ಅಭಾವದಿಂದ ನಿರುದ್ಯೋಗವು ತಲೆದೋರುತ್ತದೆ.

**ಚಲನಾತ್ಮಕವಲ್ಲ:** ಸಾಂಪ್ರದಾಯಿಕ ಸಿದ್ಧಾಂತದಂತೆ ಕೇನ್ಸನ ಮೀಮಾಂಸೆಯೂ ಚಲನಾತ್ಮಕವಾಗಿಲ್ಲವೆಂಬುದಾಗಿ ಟೀಕಿಸಲಾಗಿದೆ. ಕೇನ್ಸನು ತನ್ನ ವಿಶ್ಲೇಷಣೆಯಲ್ಲಿ ಸಮಯಕ್ಕೆ ಅಷ್ಟು ಮಹತ್ವ ನೀಡಿಲ್ಲ. ಉದಾ: ವರಮಾನವು ವೃದ್ಧಿಯಾದಂತೆ ಅನುಬೋಗದ ಪ್ರಮಾಣವೂ ವೃದ್ಧಿಸುತ್ತದೆ ಎಂಬುದು ಕೇನ್ಸನ ವಿಚಾರಧಾರೆ. ಆದರೆ ವಾಸ್ತವದಲ್ಲಿ ಆವೆರಡು ಕ್ರಿಯೆಗಳು ಏಕಕಾಲದಲ್ಲಿ ಸಂಭವಿಸುವುದಿಲ್ಲ.

**ಅಲ್ಪಾವಧಿ:** ಕೇನ್ಸನ ಮೀಮಾಂಸೆಯು ಸಮಗ್ರ ಅರ್ಥಶಾಸ್ತ್ರಕ್ಕೆ ಆದ್ಯತೆ  ನೀಡಿ ದೀರ್ಘಾವಧಿ ಸಮಸ್ಯೆಗಳನ್ನು ಪರಿಗಣಿಸಿಲ್ಲ. ಅನೇಕ ವೇಳೆ ದೀಘಾವಧಿ ವಿಶ್ಲೇಷಣೆಯು ಕೂಡ ಉಪಯುಕ್ತವಾಗಿರುತ್ತದೆ ಎಂಬುದನ್ನು ಮನಗಂಡಿಲ್ಲ.

**ಸಮಾರೋಪ:** ಇಷ್ಟೆಲ್ಲ ಟೀಕೆಗಳಿಗೊಳಗಾದರೂ ಆಧುನಿಕ ಅರ್ಥಶಾಸ್ತ್ರಕ್ಕೆ ಕೇನ್ಸನ ಮೀಮಾಮಸೆಯು ಮಹತ್ವಪೂರ್ಣವಾದ ಕೊಡುಗೆಯಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಹೆನ್ರಿ ಹ್ಯಾಜಲಿಟ್ ಅಚರು ಕೇನ್ಸನ ಬಗ್ಗೆ ಹೀಗೆ ಅಭಿಪ್ರಾಯ ವ್ಯಕ್ತ ಪಡಿಸಿದ್ದರೆ: 'ಇಪ್ಪತ್ತನೇ ಶತಮಾನದ ಅದ್ವಿತೀಯ ಅರ್ಥಶಾಸ್ತ್ರವೆಂದರೆ ಜಾನ್ ಮೆನಾರ್ಡ್ ಕೇನ್ಸ್ ಮತ್ತು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ಅತಿ ಪ್ರಭಾವಶಾಲಿಯಾದ ಗ್ರಂಥವೆಂದರೆ ೧೯೩೬ರಲ್ಲಿ ಪ್ರಕಟವಾದ ಕೇನ್ಸನ ''ಸಾರ್ವತ್ರಿಕ ಮೀಮಾಂಸೆ'' (The General Theory)'.

# ಅನುಭೋಗ ಕ್ರಿಯೆ (ಅನುಭೋಗ ಪ್ರವೃತ್ತಿ)

# Consumption function

ಅನುಭೋಗ ಕ್ರಿಯೆ ಅಥವಾ ಅನುಭೋಗ ಪ್ರವೃತ್ತಿಯು ಸಮಗ್ರ ಬೇಡಿಕೆಯನ್ನು ನಿರ್ಧರಿಸುವ ಅಂಶಗಳಲ್ಲೊಂದು. ಅನುಭೋಗವು ಕಡಿಮೆ ಇದ್ದಲ್ಲಿ ಪರಿಣಾಮಕಾರಿ ಬೇಡಿಕೆಯ ಕೊರತೆಯಿಂದ ಆದಾಯ, ಉದ್ಯೋಗ ಮತ್ತು ಉತ್ಪನ್ನಗಳು ಕಡಿಮೆಯಾಗುತ್ತದೆ. ಅನುಭೋಗ ಪ್ರವೃತ್ತಿಯು ಆದಾಯ ಬದಲಾದಂತೆ ಅನುಭೋಗವು ಹೇಗೆ ಬದಲಾಗುತ್ತದೆ ಎಂಬುದನ್ನು ವಿವರಿಸುತ್ತದೆ. ಕೇನ್ಸ ಅನುಭೋಗ ಪ್ರವೃತ್ತಿಯನ್ನು ಮುಖ್ಯವಾಗಿ ಎರಡು ಪರಿಭಾವನೆಗಳಿಂದ ವಿವರಿಸಿದ್ದಾರೆ, ಅವುಗಳೆಂದರೆ: APC ಮತ್ತು MPC.

ಅನುಭೋಗ ಕಾರ್ಯಕಾರಿಣಿ (C) = F(Y)

ಸರಾಸರಿ ಅನುಭೋಗ ಪ್ರವೃತ್ತಿ (APC) = $\dfrac{C}{Y}$

ಸೀಮಾಂಥ ಅನುಭೋಗ ಪ್ರವೃತ್ತಿ (MPC) = $\dfrac{\Delta C}{\Delta Y}$

ಸರಾಸರಿ ಅನುಭೋಗ ಪ್ರವೃತ್ತಿಯು ಆರ್ಥಿಕತೆಯ ಒಟ್ಟು ಆದಾಯ ಮತ್ತು ಒಟ್ಟು ವೆಚ್ಚದ ನಡುವಿನ ನೇರ ಸಂಭಂದವನ್ನು ತಿಳಿಸುತ್ತದೆ. ಅಂದರೆ ಒಟ್ಟು ವೆಚ್ಚವನ್ನು ಒಟ್ಟು ಆದಾಯದಿಂದ ಬಾಗಿಸಿದಾಗ ಸರಸರಿ ಅನುಭೋಗ ಪ್ರವೃತ್ತಿ ತಿಳಿಯುತ್ತದೆ. ಉದಾ: ಒಟ್ಟು ಆದಾಯ ನೂರು ಕೋಟಿ ರುಪಾಯಿಗಳು ಇದ್ದಲ್ಲಿ ಅನುಭೋಗವು ಎಂಬತ್ತು ಕೋಟಿ ಇದ್ದರೆ ಶೇಕಡ ಎಂಬತ್ತರಷ್ಟನ್ನು ಖರ್ಚು ಮಾಡಲಾಗುತ್ತದೆ.

ಸೀಮಾಂತ ಅನುಭೋಗ ಪ್ರವೃತ್ತಿಯು ಆದಾಯದಲ್ಲಿ ಬದಲಾವಣೆಯಾದಾಗ ಅನುಬೋಗದಲ್ಲಿ ಯಾವರೀತಿ ಬದಲಾಗುತ್ತದೆ ಎಂಬುದನ್ನು ತಿಳಿಸುತ್ತದೆ. ಉದಾ: ಆದಾಯವು ನೂರು ಕೋಟಿಗಳಿಂದ ೧೧೦ ಕೋಟಿಗಳಿಗೆ ಏರಿಕೆಯಾದಾಗ ಅನುಭೋಗವು ೮೮ ಕ್ಕೆ ಏರುತ್ತದೆ. ಇಲ್ಲಿ ಹೆಚ್ಚುವರಿ ಆದಾಯ ೧೦ ಕೋಟಿ ಮತ್ತು ಹೆಚ್ಚುವರಿ ಅನುಭೋಗ ೮ ಕೋಟಿ, ಸೀಮಾಂತ ಅನುಭೋಗ ಪ್ರವೃತ್ತಿ ೦.೮ ಆಗಿರುತ್ತದೆ.

## ಕೇನ್ಸನ ಅನುಭೋಗದ ಮಾನಸಿಕ ನಿಯಮ

ಕೇನ್ಸ ತನ್ನ ಅನುಭೋಗ ಮಿಮಾಂಸೆಯಲ್ಲಿ ಕೆಲವೊಂದು ಮಾನಸಿಕ ನಿಯಮಗಳನ್ನು ಪ್ರತಿಪಾದಿಸಿದ್ದನೆ, ಅವುಗಳೆಂದರೆ: ಆದಾಯವು ಹೆಚ್ಚಿದಂತೆ ಅನುಭೋಗವು ಹೆಚ್ಚುತ್ತದೆ, ಆದರೆ ಹೆಚ್ಚಾದ ಅನುಭೋಗವು ಹೆಚ್ಚಾದ ಆದಾಯಕಿಂತ ಕಡಿಮೆ ಇರುತ್ತದೆ. ಕೇನ್ಸನ ಅನುಭೋಗದ ಮಾನಸಿಕ ನಿಯಮದ ಪ್ರಕಾರ ಅನುಭೋಗಕ್ಕೂ ಮತ್ತು ಆದಾಯಕ್ಕೂ ಇರುವ ಸಂಭಂದವನ್ನು ಈ ಕೆಳಗಿನ ಅನುಭೋಗದ ಪಟ್ಟಿ ಮತ್ತು ರೇಖೆಯಿಂದ ತಿಳಿಯಬಹುದು:

| ಆದಾಯ | ಅನುಭೋಗ | ಉಳಿತಾಯ |
|---|---|---|
| ೦ | ೨೦ | −೨೦ |
| ೬೦ | ೭೦ | −೧೦ |
| ೧೨೦ | ೧೨೦ | ೦ |
| ೧೮೦ | ೧೭೦ | ೧೦ |
| ೨೪೦ | ೨೨೦ | ೨೦ |
| ೩೦೦ | ೨೭೦ | ೩೦ |
| ೩೬೦ | ೩೨೦ | ೪೦ |
| | | |

ಕೇನ್ಸನ ಅನುಭೋಗದ ಮಾನಸಿಕ ನಿಯಮವು ಕೆಲವೊಂದು ಕಲ್ಪನೆಗಳಿಂದ ಕೂಡಿದೆ:
ಅನುಭೋಗ ಪ್ರವೃತ್ತಿಯು ಅಲ್ಪಾವಧಿಯಲ್ಲಿ ಸ್ಥಿರವಾಗಿರುತ್ತದೆ.
ಅರ್ಥವ್ಯವಸ್ಥೆಯಲ್ಲಿ ಸಾಮಾನ್ಯ ಸ್ಥಿತಿಗತಿಗಳು ಸಹಜ ಸ್ಥಿತಿಯಲ್ಲಿ ಇರುತ್ತದೆ.
ಅನುಭೋಗದ ಮೇಲೆ ನಿಯಂತ್ರಣಗಳಿರುವುದಿಲ್ಲ.
ಅನುಭೋಗ ಕ್ರಿಯೆಯನ್ನು ನಿರ್ಧರಿಸುವ ಅಂಶಗಳು:

ಕೇನ್ಸನ ಪ್ರಕಾರ ಅನುಭೋಗ ಪ್ರವೃತ್ತಿಯು ವ್ಯಕ್ತಿ ನಿಷ್ಠ (subjective) ಹಾಗು ವಸ್ತು ನಿಷ್ಠ ಅಂಶಗಳನ್ನು ಒಳಗೊಂಡಿದೆ. ವ್ಯಕ್ತಿ ನಿಷ್ಠ ಅಂಶಗಳೆಂದರೆ ಅನುಭೋಗಿಯ ಮಾನಸಿಕ ನಡವಳಿಕೆ ಸಂಸ್ಕೃತಿ ಸಾಮಾಜಿಕ ಅಂಶಗಳು ಮುಂತಾದವು. ಜೊತೆಗೆ ವಸ್ತು ನಿಷ್ಠ ಅಂಶಗಳು ಈ ಕೆಳಗಿನಂತಿವೆ:

ಆದಾಯ (Income) : ಆದಾಯಕ್ಕೂ ಅನುಭೋಗಕ್ಕೂ ನೇರ ಸಂಭಂದವಿದೆ. ಆದಾಯ ಹೆಚ್ಚಾದರೆ ಅನುಭೋಗ ಹೆಚ್ಚಾಗುತ್ತದೆ ಮತ್ತು ಆದಾಯ ಕಡಿಮಯಾದರೆ ಅನುಬೋಗ ಕಡಿಮೆಯಾಗುತ್ತದೆ.

ಸಂಪತ್ತಿನ ಹಂಚಿಕೆ (Distribution of income): ಹಂಚಿಕೆಯಲ್ಲಿ ಅಸಮಾನತೆ ಇದ್ದರೆ ಅನುಭೋಗ ಪ್ರವೃತ್ತಿ ಕಡಿಮೆ ಇರುತ್ತದೆ, ಹಂಚಿಕೆಯು ಸಮಾನವಾಗಿದ್ದರೆ ಅನುಭೋಗ ಪ್ರವೃತ್ತಿಯು ಅಧಿಕವಾಗಿರುತ್ತದೆ.

ತೆರಿಗೆ ನೀತಿ (Tax Policy): ತೆರಿಗೆಗಳ ಭಾರವು ಅತಿಯಾಗಿದ್ದರೆ ಅನುಭೋಗ ಪ್ರವೃತ್ತಿ ಕಡಿಮೆ ಇರುತ್ತದೆ ; ತೆರಿಗೆ ಭಾರವು ಕಡಿಮೆ ಇದ್ದಲ್ಲಿ ಅನುಭೋಗ ಪ್ರವೃತ್ತಿಯು ಹೆಚ್ಚಾಗಿರುತ್ತದೆ.

ಅನಿರೀಕ್ಷಿತ ಲಾಭ ನಷ್ಟಗಳು (Unexpected profits and Losses): ಉದ್ಯಮ ವ್ಯವಹಾರಗಳಲ್ಲಿ ಮತ್ತು ಇನ್ನಿತರ ರೂಪಗಳಲ್ಲಿ ಅನಿರೀಕ್ಷಿತವಾಗಿ ಹೆಚ್ಚು ಲಾಭಗಳು ದೊರೆತಲ್ಲಿ ಅನುಭೋಗ ಪ್ರವೃತ್ತಿಯು ಹೆಚ್ಚುತ್ತದೆ. ಬದಲಾಗಿ ಅನಿರೀಕ್ಷಿತ ನಷ್ಟ ಸಂಭವಿಸಿದರೆ ಅನುಭೋಗ ಪ್ರವೃತ್ತಿ ತಗ್ಗುತ್ತದೆ.

ಬೆಲೆ (Price): ಬೆಲೆಗಳು ಏರಿಕೆಯಾಗುತ್ತಿದ್ದರೆ ನೈಜ ಆದಾಯವು ಕಡಿಮೆಯಾಗಿ ಅನುಭೋಗ ಪ್ರವೃತ್ತಿ ತಗ್ಗುತ್ತದೆ. ಬೆಲೆಗಳು ಇಳಿಕೆಯಾಗುತ್ತಿದ್ದರೆ ಅನುಭೋಗ ಪ್ರವೃತ್ತಿ ಹೆಚ್ಚಾಗುತ್ತದೆ.

ಭವಿಷ್ಯದ ನಿರೀಕ್ಷೆಗಳು: ಭವಿಷ್ಯದಲ್ಲಿ ಸ್ಥಿರವಾದ ಆದಾಯದ ನಿರೀಕ್ಷೆ ಇದ್ದರೆ ಅನುಭೋಗ ಪ್ರವೃತ್ತಿ ಹೆಚ್ಚಿರುತ್ತದೆ. ಬದಲಾಗಿ ಆದಾಯದ ಹರಿಯುವಿಕೆಯಲ್ಲಿ ಅಸ್ಥಿರತೆ ಇದ್ದರೆ ಅನುಭೋಗ ಕಡಿಮೆಯಾಗುತ್ತದೆ.

ವಸ್ತುಗಳ ಲಭ್ಯತೆ: ಅನುಭೋಗಿ ವಸ್ತುಗಳು ಅಪಾರ ಪ್ರಮಾಣದಲ್ಲಿ ಲಭ್ಯವಿದ್ದರೆ ಅನುಭೋಗ ಪ್ರವೃತ್ತಿ ಹೆಚ್ಚಿರುತ್ತದೆ. ಪ್ರತಿಯಾಗಿ ಅನುಭೋಗಿ ವಸ್ತುಗಳ ಕೊರತೆಯು ಅನುಭೋಗ ಪ್ರವೃತ್ತಿಯನ್ನು ಕಡಿಮೆ ಮಾಡುತ್ತದೆ.

ಪ್ರದರ್ಶನ ಪರಿಣಾಮ (Demonstration effect): ಜಾಹಿರಾತು ಮತ್ತು ಬೌತಿಕವಾಗಿ ವಸ್ತುಗಳನ್ನು ನೋಡುವುದರಿಂದ ಜನರ ಮನಸ್ಸುಗಳಲ್ಲಿ ಅನುಕರಣೆ ಉಂಟಾಗಿ ಅನುಭೋಗ ಪ್ರವೃತ್ತಿಯು ಹೆಚ್ಚಾಗುತ್ತದೆ.

ಈ ಎಲ್ಲಾ ಅಂಶಗಳ ಜೊತೆಗೆ ಬಹುಕಾಲ ಬಾಳುವ ವಸ್ತುಗಳನ್ನು ಖರೀದಿಸಲು ದೊರೆಯುವ ಸಾಲಗಳು, ಮಾರಾಟ ತಂತ್ರಗಳು ಮತ್ತು ಜನಸಂಖ್ಯಾ ಅಂಶಗಳು ಅನುಭೋಗ ಪ್ರವೃತ್ತಿಯನ್ನು ಹೆಚ್ಚಿಸುತ್ತದೆ.

## ಹೂಡಿಕೆಯ ಕ್ರಿಯೆ (Investment Function)

ಕೇನ್ಸನ ಉದ್ಯೋಗ ಸಿದ್ಧಾಂತದಲ್ಲಿ ಹೂಡಿಕೆಯ ಕ್ರಿಯೆಯು ಪ್ರಮುಖ ಅಂಶ. ಅಲ್ಪಾವಧಿಯಲ್ಲಿ ಅನುಭೋಗ ಪ್ರವೃತ್ತಿ ಸ್ಥಿರವಾಗಿ ಇರುವುದರಿಂದ ಪರಿಣಾಮಕಾರಿ ಬೇಡಿಕೆಯನ್ನು ಹೆಚ್ಚಿಸಿ ಉತ್ಪನ್ನ ಹಾಗೂ ಉದ್ಯಗಗಳನ್ನು ಹೆಚ್ಚಿಸುವುದರಲ್ಲಿ ಹೂಡಿಕೆಯ ಕ್ರಿಯೆಯು ಹೆಚ್ಚು ಮಹತ್ವ ಪಡೆದುಕೊಂಡಿದೆ.

'ಹೂಡಿಕೆ' (Investment); ಎಂದರೆ ನೈಜ ಹೂಡಿಕೆಯಾಗಿದ್ದು ಹೊಸದಾಗಿ ಆಸ್ತಿ, ಯಂತ್ರಗಳು, ಕಟ್ಟಡಗಳು ಮತ್ತು ಸರಕುಗಳನ್ನು ನಿರ್ಮಾಣ ಮಾಡುವ ಕ್ರಿಯೆ. ಈಗಾಗಲೆ ಇರುವ ಬಂಡವಾಳ ಸರಕುಗಳ ಸಂಗ್ರಹದ ಜೊತೆಗೆ ಹೆಚ್ಚುವರಿ ಸೇರ್ಪಡೆಯ ಹೂಡಿಕೆಯಾಗಿದ್ದು ಹಾಲಿ ಇರುವ ಬಂಡವಾಳ ವಸ್ತುಗಳ ಖರೀದಿಸುವಿಕೆ ಅಥವ ಹಣಕಾಸಿನ ಹೂಡಿಕೆಗಳು ನೈಜ ಹೂಡಿಕೆಯಲ್ಲ.

ಕೇನ್ಸನ ಪ್ರಕಾರ ಹೂಡಿಕೆಯು ಪ್ರಕ್ರಿಯೆಯು ಪ್ರೇರಿತ ಹೂಡಿಕೆಯಾಗಿದ್ದು ಅದು ಬಂಡವಾಳದ ಸೀಮಾಂತ ದಕ್ಷತೆ ಮತ್ತು ಬಡ್ಡಿಯ ದರವನ್ನು ಅವಲಂಬಿಸಿದೆ.

ಹೊಸದಾಗಿ ಹೂಡಿಕೆ ಮಾಡುವ ಬಂಡವಾಳದಿಂದ ನಿರೀಕ್ಷಿಸಲಾಗುವ ಲಾಭದ ದರಕ್ಕೆ ಬಂಡವಾಳದ ಸೀಮಾಂತ ದಕ್ಷತೆ (MEC) ಎಂದು ಹೆಸರು.

ಕೇನ್ಸನ ಪ್ರಕಾರ ಬಂಡವಾಳದ ಸೀಮಾಂತ ದಕ್ಷತೆಯು ಇಳಿಮುಖ ಪ್ರತಿಫಲ ನಿಯಮಕ್ಕೆ ಒಳಪಟ್ಟಿದೆ. ಒಂದೇ ವಿಧದ ಯಂತ್ರೋಪಕರಣಗಳ ಮೇಲೆ ಹೆಚ್ಚು ಬಂಡವಾಳವನ್ನು ತೊಡಗಿಸಿದಂತೆ ಅದರಿಂದ ದೊರೆಯುವ ಪ್ರತಿಫಲ ಕಡಿಮೆಯಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಬಂಡವಾಳದ ಪೂರೈಕೆಯ ಬೆಲೆ ಏರತೊಡಗುತ್ತದೆ. ಹೂಡಿಕೆಯ ಹೆಚ್ಚಳವು ಯಂತ್ರೋಪಕರಣಗಳಿಗೆ ಬೇಡಿಕೆಯನ್ನು ಹೆಚ್ಚಿಸುವುದರಿದ ಅವುಗಳ ಬೆಲೆ ತಾನಾಗಿಯೇ ಏರುತ್ತದೆ. ಆ ಮೇರೆಗೆ ಹೂಡಿಕೆಯ ಹೆಚ್ಚಳವು ಎರಡು ವಿರುದ್ಧ ಪರಿಣಾಮಗಳನ್ನು ಉಂಟುಮಾಡುತ್ತದೆ. ಒಂದು ಕಡೆ ವೆಚ್ಚ ಹೆಚ್ಚುತ್ತಾ ಹೋಗುತ್ತದೆ. ಇನ್ನೊಂದು ಕಡೆ ಪ್ರತಿಫಲ ಇಳಿಯುತ್ತಾ ಹೋಗುತ್ತದೆ.

## ಹೂಡಿಕೆಯ ಬೇಡಿಕೆ ಕಾರ್ಯಕಾರಿಣಿ (Investment Demand Schedule):

ಒಂದು ನಿಕಟ ಕಾಲಾವಧಿಯಲ್ಲಿ ವಿವಿಧ ಮೊತ್ತಗಳ ಹೂಡಿಕೆಗಳಲ್ಲಿ ಊಹಿಸಬಹುದಾದ ಬಂಡವಾಳದ ಸೀಮಾಂತ ದಕ್ಷತೆಯನ್ನು ತೋರಿಸುವ ಪಟ್ಟಿಯನ್ನು 'ಹೂಡಿಕೆಯ ಬೇಡಿಕೆಯ ಕಾರ್ಯಕಾರಿಣಿ' ಎಂದು ಕರೆಯಲಾಗುತ್ತದೆ. ಅಂದರೆ ಈ ಕಾರ್ಯಕಾರಿಣಿ (ಪಟ್ಟಿಯು) ಹೂಡಿಕೆ ಮತ್ತು ಬಂಡವಾಳದ ಸೀಮಾಂತ ದಕ್ಷತೆಯ ನಡುವಿನ ಸಂಬಂಧವನ್ನು ವಿಶ್ಲೇಷಿಸುತ್ತದೆ.

ಬಂಡವಾಳದ ಸೀಮಾಂತ ದಕ್ಷತೆ ಕಡಿಮೆಯಾಗುವುದರಿಂದ ಹೂಡಿಕೆಯ ಉದ್ದೇಶಕ್ಕೆ ಹಣಕ್ಕೆ ಬೇಡಿಕೆಯು ಕಡಿಮೆಯಾಗುತ್ತದೆಂದು ಕೇನ್ಸ್ ಭಾವಿಸಿದ್ದಾನೆ. ಆ ಮೇರೆಗೆ ಹೂಡಿಕೆಯ ರೇಖೆ ಮತ್ತು ಬಂಡವಾಳದ ಸೀಮಾಂತ ದಕ್ಷತೆಯ ರೇಖೆ ಕೆಳಮುಖವಾಗಿ ಬಾಗಿರುತ್ತವೆ.


ಬಂಡವಾಳದ ಸೀಮಾಂತ ದಕ್ಷತೆಯು ಇಳಿಮುಖವಾಗುವ ಸನ್ನಿವೇಶವನ್ನು ಕೆಳಗಿನ ಪಟ್ಟಿಯ ಸಹಾಯದಿಂದ ವಿವರಿಸಬಹುದು.

ಹೂಡಿಕೆಯ ಬೇಡಿಕೆ ಕಾರ್ಯಕಾರಿಣಿ

| ಹೂಡಿಕೆ (ಕೋಟಿ ರೂಪಾಯಿಗಳುಲ್ಲಿ) | ಬಂಡವಾಳದ ಸೀಮಾಂತ ದಕ್ಷತೆ (ಶೇಕಡಾವಾರು) |
|---|---|
| ೧೦ | ೧೦ |
| ೨೦ | ೯ |
| ೩೦ | ೮ |
| ೪೦ | ೭ |
| ೫೦ | ೬ |
| ೬೦ | ೫ |

ಹೂಡಿಕೆಯ ಪ್ರಮಾಣ ಹೆಚ್ಚಿದಂತೆ ಬಂಡವಾಳದ ಸೀಮಾಂತ ದಕ್ಷತೆ ಕುಸಿದಿರುವುದನ್ನು ಪಟ್ಟಿಯಲ್ಲಿ ಗಮನಿಸಬಹುದು. ಹೂಡಿಕೆಯ ಪ್ರಮಾಣವು ೧೦ ಕೋಟಿ ರೂಪಾಯಿಗಳಿಂದ ೬೦ ಕೋಟಿ ರೂಪಾಯಿಗಳಿಗೆ ಹೆಚ್ಚಿದಂತೆ ಬಂಡವಾಳ ಸೀಮಾಂತ ದಕ್ಷತೆಯ ಶೇಕಡಾವಾರು ೧೦ ರಿಂದ ೫ಕ್ಕೆ ಕುಸಿದಿದೆ.

ಕೆಳಗಿನ ರೇಖಾ ಚಿತ್ರವು ಬಂಡವಾಳದ ಸೀಮಾಂತ ದಕ್ಷತೆ ಹಾಗೂ ಹೂಡಿಕೆಯ ಬೇಡಿಕೆಯನ್ನು ವ್ಯಕ್ತಪಡಿಸುತ್ತದೆ.




ಹೂಡಿಕೆ ಮತ್ತು ಬಂಡವಾಳದ ಸೀಮಾಂತ ದಕ್ಷತೆ

ರೇಖಾ ಚಿತ್ರದಲ್ಲಿ MEC ಬಂಡವಾಳದ ಸೀಮಾಂತ ದಕ್ಷತೆಯ ರೇಖೆಯಾಗಿದೆ. ಬಡ್ಡಿದರ OR ಇದ್ದಾಗ ಹೂಡಿಕೆಯ ಪ್ರಮಾಣ OI ಆಗಿದ್ದಿತು. ಬಡ್ಡಿಯ ದರ $OR_1$ ಗೆ ಇಳಿದಾಗ ಹೂಡಿಕೆಯ ಪ್ರಮಾಣ $OI_1$ ಗೆ ವಿಸ್ತರಿಸಿದೆ. ಹೂಡಿಕೆ ಹೆಚ್ಚಿದಂತೆ ಬಂಡವಾಳದ ಸೀಮಾಂತ ದಕ್ಷತೆ ಇಳಿಯುತ್ತಾ ಹೋಗಿದೆ ಎಂಬುದು ಮೇಲಿನ ಚಿತ್ರದಿಂದ ಕಂಡುಬರುತ್ತದೆ.

ಹೂಡಿಕೆಯು ಅನಿಶ್ಚತವಾಗಿದ್ದು, ಅದು ತೀವ್ರ ಏರಿಳಿತಗಳಿಗೆ ಒಳಗಾಗಿರುತ್ತದೆಂದು ಕೇನ್ಸ್ ಭಾವಿಸಿದ್ದಾನೆ. ಬಂಡವಾಳದ ಸೀಮಾಂತ (ಅಂಚಿನ) ದಕ್ಷತೆಗಿಂತ ಬಡ್ಡಿಯ ದರವು ಅಧಿಕವಾದರೆ ಹೂಡಿಕೆಯು ನೆರವೇರಲು ಅವಕಾಶವೇ ಇರುವುದಿಲ್ಲ. ಆದ್ದರಿಂದ ಉದ್ಯಮಿಯು ಇವೆರಡನ್ನು ತುಲನೆ ಮಾಡಬೇಕಾಗುತ್ತದೆ. ಆದರೆ ಇದು ಸುಲಭದ ಕೆಲಸವಲ್ಲ. ಬಡ್ಡಿಯ ದರವನ್ನು ನಿರ್ಧರಿಸುವ ಅಂಶಗಳೇ ಬೇರೆ, ಬಂಡವಾಳದ ಸೀಮಾಂತ (ಅಂಚಿನ) ದಕ್ಷತೆಯನ್ನು ನಿರ್ಧರಿಸುವ ಅಂಶಗಳೇ ಬೇರೆ. ಅಲ್ಲದೆ ಬಂಡವಾಳದ ಸೀಮಾಂತ (ಅಂಚಿನ) ದಕ್ಷತೆ ಸರಳವಾದ ಅಂದಾಜಿಗೆ ನಿಲುಕುವುದಿಲ್ಲ. ಹೀಗಿರುವಾಗ ಉದ್ಯಮಿಗಳು ಹೊಸ ಹೂಡಿಕೆಯನ್ನು ಕೈಗೊಳ್ಳಲು ಸುಲಭವಾಗಿ ಪ್ರೇರಿತವಾಗುವುದಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ ಖಾಸಗಿ ಹೂಡಿಕೆಯು ಅನಿಶ್ಚಿತವಾಗಿರುತ್ತದೆ. ಈ ದೃಷ್ಟಿಯಿಂದ ಅವನು ಸರ್ಕಾರದ ಹಸ್ತಕ್ಷೇಪ ಹಾಗೂ ಅಧಿಕ ಮೊತ್ತದ ಸಾರ್ವಜನಿಕ ವೆಚ್ಚವನ್ನು ಶಿಫಾರಸು ಮಾಡಿದ್ದಾನೆ.

## ಬಂಡವಾಳದ ಸೀಮಾಂತ ದಕ್ಷತೆಯ ಮೇಲೆ ಪ್ರಭಾವ ಬೀರುವ ಅಂಶಗಳು
## (Factors influencing Marginal Efficiency of Capital)

ಅನೇಕ ಅಂಶಗಳು ಬಂಡವಾಳದ ಸೀಮಾಂತ (ಅಂಚಿನ) ದಕ್ಷತೆಯ ಮೇಲೆ ಪ್ರಭಾವ ಬೀರುತ್ತವೆ. ಅವುಗಳನ್ನು ಕೆಳಗೆ ವಿವರಿಸಿದೆ.

೧. ಬೇಡಿಕೆಯ ಸ್ವರೂಪ (Nature of Demand): ಸರಕುಗಳಿಗೆ ಬೇಡಿಕೆ ಅಧಿಕವಾಗಿದ್ದರೆ ಉತ್ಪಾದನೆಯ ಹೆಚ್ಚಳವು ಭಾರೀ ಲಾಭವನ್ನು ದೊರೆಕಿಸಿಕೊಡುತ್ತದೆಂದು ಉದ್ಯಮಿಗಳು ನಿರೀಕ್ಷಿಸುತ್ತಾರೆ. ಆ ಮೇರೆಗೆ ಬೇಡಿಕೆ ಹೆಚ್ಚಿದರೆ ಬಂಡವಾಳದ ಸೀಮಾಂತ ದಕ್ಷತೆಯೂ ಸಹ ಹೆಚ್ಚಿರುತ್ತದೆ. ಸರಕುಗಳಿಗೆ ಬೇಡಿಕೆಯು ಕಡಿಮೆಯಾಗುತ್ತದೆಂದು ನಿರೀಕ್ಷಿಸಿದರೆ ಹೂಡಿಕೆಯ ಪ್ರಮಾಣವು ಕುಸಿಯುತ್ತದೆ. ಇದರಿಂದಾಗಿ ಬಂಡವಾಳದ ಸೀಮಾಂತ ದಕ್ಷತೆಯು ಕಡಿಮೆಯಾಗುತ್ತದೆ.

೨. ಬೆಲೆ ಮತ್ತು ಉತ್ಪಾದನಾ ವೆಚ್ಚ (Price and Cost of Production): ವಸ್ತುಗಳ ಬೆಲೆಯು ಇಳಿಯುತ್ತಿದ್ದು ಉತ್ಪಾದನಾ ವೆಚ್ಚ ಏರುತ್ತಿದ್ದರೆ ಬಂಡವಾಳದ ಸೀಮಾಂತ ದಕ್ಷತೆ ಕಡಿಮೆ ಇರುತ್ತದೆ. ಏಕೆಂದರೆ ಅಂತಹ ಸಮಯದಲ್ಲಿ ಉದ್ಯಮಿಗಳು ಹೆಚ್ಚಿನ ಲಾಭವನ್ನು ನಿರೀಕ್ಷಿಸಲು ಸಾಧ್ಯವಿರುವುದಿಲ್ಲ. ಬದಲಾಗಿ ಬೆಲೆಗಳು ಏರುತ್ತಿದ್ದು ಉತ್ಪಾದನಾ ವೆಚ್ಚ ಕಡಿಮೆ ಇದ್ದರೆ ಬಂಡವಾಳದ ಸೀಮಾಂತ ದಕ್ಷತೆ ಅಧಿಕವಾಗಿರುತ್ತದೆ.

೩. ಜನಸಂಖ್ಯೆ (Population): ಜನಸಂಖ್ಯೆಯು ರಭಸವಾಗಿ ಬೆಳೆಯುತ್ತಿದ್ದರೆ ಬಂಡವಾಳದ ಸೀಮಾಂತ ದಕ್ಷತೆ ಅಧಿಕವಾಗಿರುತ್ತದೆ. ಏಕೆಂದರೆ ಅಂತಹ ಸಂದರ್ಭದಲ್ಲಿ ಎಲ್ಲಾ ವಿಧದ ಸರಕುಗಳಿಗೆ ಬೇಡಿಕೆ ಬರುತ್ತದೆಂದು ಭಾವಿಸಿ ಉದ್ಯಮಿಗಳು ಹೆಚ್ಚು ಹೂಡಿಕೆಯನ್ನು ಕೈಗೊಳ್ಳಲು ಮುಂದಾಗುತ್ತಾರೆ.

೪. ಉತ್ಪಾದನಾ ತಂತ್ರ (Technique of Population): ಹೊಸ ಉತ್ಪಾದನಾ ತಂತ್ರವನ್ನು ಬಳಸಿದಾಗ ಕಡಿಮೆ ವೆಚ್ಚದಲ್ಲಿ ಶ್ರೇಷ್ಠ ಗುಣಮಟ್ಟದ ವಸ್ತುಗಳು ಉತ್ಪಾದನೆಯಾಗುವುದರಿಂದ ಅವುಗಳಿಗೆ ವ್ಯಾಪಕ ಬೇಡಿಕೆ ಬರುತ್ತದೆ. ಇದರಿಂದಾಗಿ ಉದ್ಯಮಿಗಳು ಒಳ್ಳೆಯ ಲಾಭಗಳನ್ನು ನಿರೀಕ್ಷಿಸುವುದು ಸಹಜ. ಆ ಮೇರೆಗೆ ಉತ್ಪಾದನಾ ತಂತ್ರವು ಹೊಸದಾಗಿದ್ದರೆ ಮತ್ತು ಆಗಾಗ್ಗೆ ಮಾರ್ಪಾಡು ಹೊಂದುತ್ತಿದ್ದರೆ, ಬಂಡವಾಳದ ಸೀಮಾಂತ ದಕ್ಷತೆ ಹೆಚ್ಚಿರುತ್ತದೆ. ಇದಕ್ಕೆ ವಿರುದ್ಧವಾಗಿ ಉತ್ಪಾದನಾ ತಂತ್ರವು ಹಳೆಯದಾಗಿದ್ದರೆ ಬಂಡವಾಳದ ಸೀಮಾಂತ ದಕ್ಷತೆ ಕಡಿಮೆ ಇರುತ್ತದೆ.

೫. ಭವಿಷ್ಯದ ನಿರೀಕ್ಷೆಗಳು (Future Expectations): ಭವಿಷ್ಯದಲ್ಲಿ ಉದ್ಯಮದಲ್ಲಿ ಆಶಾದಾಯಕ ಪರಿಸ್ಥಿತಿಯನ್ನು ಉದ್ಯಮಿಗಳು ನಿರೀಕ್ಷಿಸಿದರೆ ಬಂಡವಾಳದ ಸೀಮಾಂತ ದಕ್ಷತೆ ಜಾಸ್ತಿ ಇರುತ್ತದೆ. ಉದ್ಯಮದಲ್ಲಿ ನಿರಾಶಾದಾಯಕ ಪರಿಸ್ಥಿತಿಯನ್ನು ನಿರೀಕ್ಷಿಸಿದರೆ ಬಂಡವಾಳದ ಸೀಮಾಂತ ದಕ್ಷತೆ ಕಡಿಮೆ ಇರುತ್ತದೆ ಮತ್ತು ಹೂಡಿಕೆಯ ಪ್ರಮಾಣ ಇಳಿಯುತ್ತದೆ.

೬. ಅನುಭೋಗ ಪ್ರವೃತ್ತಿ (Propensity to Consume): ಅನುಭೋಗ ಪ್ರವೃತ್ತಿಯು ಅಧಿಕವಾಗಿರುವಾಗ ವಸ್ತುಗಳಿಗೆ ಬೇಡಿಕೆಯು ಹೆಚ್ಚುತ್ತದೆ. ಈ ಕಾರಣದಿಂದ ಉದ್ಯಮಿಗಳು ಅಧಿಕವಾದ ಪ್ರಮಾಣದ ಲಾಭಗಳನ್ನು ನಿರೀಕ್ಷಿಸಬಹುದು. ಅಂದರೆ ಅನುಭೋಗ ಪ್ರವೃತ್ತಿ ಹೆಚ್ಚಾಗಿದ್ದರೆ ಹೂಡಿಕೆಯ ಗಾತ್ರ ಮತ್ತು ಬಂಡವಾಳದ ಸೀಮಾಂತ ದಕ್ಷತೆ ಅಧಿಕವಾಗಿರುತ್ತದೆ.

ತದ್ವಿರುದ್ಧವಾಗಿ, ಅನುಭೋಗ ಪ್ರವೃತ್ತಿಯು ಕೆಳಮಟ್ಟದಲ್ಲಿದ್ದರೆ ಹೂಡಿಕೆಯ ಗಾತ್ರ ಮತ್ತು ಬಂಡವಾಳದ ಸೀಮಾಂತ ದಕ್ಷತೆ ಕಡಿಮೆ ಇರುತ್ತದೆ.

೭. ಆದಾಯದಲ್ಲಿ ಬದಲಾವಣೆಗಳು (Changes in Income): ಲಾಭಗಳ ಏರಿಕೆ, ಅನಿರೀಕ್ಷಿತ ಮೂಲಗಳಿಂದ ಆದಾಯ, ತೆರಿಗೆ ಕಡಿತ ಮುಂತಾದ ಕಾರಣಗಳಿಂದ ಅನುಭೋಗಿಗಳ ಆದಾಯದಲ್ಲಿ ಹೆಚ್ಚಳವಾಗಬಹುದು. ಇದರಿಂದಾಗಿ ಅನುಭೋಗ ಪ್ರವೃತ್ತಿ ಮತ್ತು ಸರಕುಗಳಿಗೆ ಬೇಡಿಕೆ ಜಾಸ್ತಿಯಾಗುತ್ತದೆ. ಇದರ ಪರಿಣಾಮವಾಗಿ ಬಂಡವಾಳದ ಸೀಮಾಂತ ದಕ್ಷತೆಯು ಅಧಿಕಗೊಳ್ಳುತ್ತದೆ.

೮. ಸಾರ್ವಜನಿಕ ವೆಚ್ಚ (Public expenditure): ಸಾರ್ವಜನಿಕ ವೆಚ್ಚದ ಹೆಚ್ಚಳದ ಮೂಲಕ ಅನೇಕ ಲೋಕೋಪಯೋಗಿ ಕಾಮಗಾರಿಗಳನ್ನು ಕೈಗೋಳ್ಳಬಹುದು. ಇದರಿಂದಾಗಿ ಜನರ ಆದಾಯ ಹೆಚ್ಚುತ್ತದೆ ಮತ್ತು ಸರಕುಗಳಿಗೆ ಬೇಡಿಕೆ ವಿಸ್ತರಿಸುತ್ತದೆ. ಅಧಿಕ ಪ್ರಮಾಣದ ಸರಕುಗಳು ಉತ್ಪಾದನೆಯನ್ನು ಮಾಡಬೇಕಾದ ಕಾರಣದಿಂದ ಹೂಡಿಕೆಯ ಗಾತ್ರವು ಹಿಗ್ಗುತ್ತದೆ ಮತ್ತು ಬಂಡವಾಳದ ಸೀಮಾಂತ ದಕ್ಷತೆಯು ಹೆಚ್ಚುತ್ತದೆ. ಆರ್ಥಿಕ ಮುಗ್ಗಟ್ಟಿನ ಮತ್ತು ನಿರುದ್ಯೋಗದ ನಿವಾರಣೆಯ ಉದ್ದೇಶ ಸಾಧನೆಯಲ್ಲಿ ಸರ್ಕಾರವು ಸ್ವತಂತ್ರ ಹೂಡಿಕೆಯನ್ನು ಹೆಚ್ಚಿಸಬೇಕೆಂದು ಕೇನ್ಸ್ ಸಲಹೆ ಮಾಡಿದ್ದಾನೆ.

೯. ಪೂರ್ಣ ಉತ್ಪಾದನ ಸಾಮರ್ಥ್ಯದ ಬಳಕೆ (utilization of Full Productive Capacity): ಉದ್ಯಮ ಘಟಕಗಳು ಪ್ರತಿಷ್ಠಾಪಿತ ಸಾಮರ್ಥ್ಯದಷ್ಟು (Installed Capacity) ಉತ್ಪಾದನೆ ಮಾಡದಿರಬಹುದು. ಅಂದರೆ ಅವು ಇನ್ನೂ ಉತ್ಪಾದನೆಯನ್ನು ವಿಸ್ತರಿಸಲು ಸಾಮರ್ಥ್ಯ ಹೊಂದಿದ್ದು, ಪ್ರಸ್ತುತದಲ್ಲಿ ಉತ್ಪಾದನ ಸಾಮರ್ಥ್ಯವು ಅರೆಬಳಕೆಯಾಗುತ್ತಿರಬಹುದು. ಇಂತಹ ಸನ್ನಿವೇಶದಲ್ಲಿ ಉಳಿದ ಉತ್ಪಾದನ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಉತ್ಪಾದನೆಯನ್ನು ವಿಸ್ತರಿಸಿದಾಗ ಬಂಡವಾಳದ ಸೀಮಾಂತ ದಕ್ಷತೆಯು ಸಹಜವಾಗಿ ಹೆಚ್ಚುತ್ತದೆ.

೧೦. ದ್ರವ್ಯ ಆಸ್ತಿಗಳ ಅಸ್ತಿತ್ವ (Existence of Liquid Assets): ದ್ರವ್ಯ ಆಸ್ತಿಗಳು ಅಥವಾ ಹೂಡಿಕೆ ಮಾಡಬಹುದಾದ ನಿಧಿಗಳು ಉದ್ಯಮಿಗಳ ಬಳಿ ಲಭ್ಯವಿದ್ದರೆ ಅವುಗಳ ನೆರವಿನಿಂದ ಹೂಡಿಕೆಯನ್ನು ಹೆಚ್ಚಿಸಲು ಸಾಧ್ಯವಿರುತ್ತದೆ. ಆಗ ಹೂಡಿಕೆಯ ಹೆಚ್ಚಳದಿಂದ ಬಂಡವಾಳದ ಸೀಮಾಂತ ದಕ್ಷತೆಯು ಅಧಿಕಗೊಳ್ಳುತ್ತದೆ.

# ಹಣದುಬ್ಬರ
# (Inflation)

ಸಾಮಾನ್ಯವಾಗಿ ಒಂದೇ ಸಮನೆ ಬೆಲೆ ಏರಿಕೆಯ ಸ್ಥಿತಿಗೆ ''ಅತಿಪ್ರಸರಣ'' ಅಥವಾ ''ಹಣದುಬ್ಬರ'' (inflation) ಎಂದು ಹೆಸರು. ಅಂದರೆ ಹಣದ ಮೌಲ್ಯವು ಇಳಿಯುತ್ತಿರುವ ಹಾಗು ಸರಕು ಸೇವೆಗಳ ಬೆಲೆಗಳು ಸತತವಾಗಿ ಏರುತ್ತಿರುವ ಸ್ಥಿತಿಯೇ ಅತಿಪ್ರಸರಣ. ಸರಕುಗಳ ಲಭ್ಯತೆಗೆ ಹೋಲಿಸಿದಾಗ ಹಣದ ಪೂರೈಕೆಯು ಹೆಚ್ಚುತ್ತಿರುವುದೇ ಬೆಲೆ ಏರಿಕೆಗೆ ಪ್ರಮುಖ ಕಾರಣ. ಹಣದ ಪೂರೈಕೆ ಮಿತಿಮೀರಿದ ಪ್ರಮಾಣದಲ್ಲಿರುವುದರಿಂದ ಇದಕ್ಕೆ ಹಣದುಬ್ಬರ ಅಥವ ಅತಿಪ್ರಸರಣ ಎಂಬ ಹೆಸರು ಬಂದಿದೆ. ಅತಿಪ್ರಸರಣವು ಆಧುನಿಕ ಹಣಕಾಸಿನ ಪ್ರಪಂಚದಲ್ಲಿ ಒಂದು ಮಹತ್ವದ ಘಟನೆಯಾಗಿದೆ.

ಕೋಲ್‌ಬರ್ನ್ ಎಂಬ ಅರ್ಥಶಾಸ್ತ್ರಜ್ಞರ ಪ್ರಕಾರ ''ಅತಿ ಹೆಚ್ಚು ಪ್ರಮಾಣದ ಹಣವು ಅತಿ ಕಡಿಮೆ ಸರಕುಗಳನ್ನು ಬೆನ್ನಟ್ಟುವ ಸ್ಥಿತಿಯೇ ಹಣದುಬ್ಬರ''. ಮಿಲ್ಟನ್ ಫ್ರೀಡ್‌ಮನ್‌ರ ಪ್ರಕಾರ ''ಹಣದ ಮೌಲ್ಯವು ಇಳಿಯುತ್ತಿರುವ ಪರಿಸ್ಥಿತಿ, ಅಂದರೆ ಸರಕು ಸೇವೆಗಳ ಬೆಲೆಗಳು ಏರುತ್ತಿರುವ ಪರಿಸ್ಥಿತಿಯೆ ಹಣದುಬ್ಬರ''.

**ಹಣದುಬ್ಬರದ ವಿಧಗಳು:**

೧. **ಬೇಡಿಕೆ ಎಳೆತ ಹಣದುಬ್ಬರ:** ಉತ್ಪಾದನೆಯು ಸ್ಥಗಿತವಾಗಿರುವ ಅಥವಾ ಕಡಿಮೆ ಪ್ರಮಾಣದಲ್ಲಿ ಏರುತ್ತಿರುವ ಸಂದರ್ಭದಲ್ಲಿ ಬೇಡಿಕೆಯು ನಿರಂತರವಾಗಿ ಮತ್ತು ರಭಸವಾಗಿ ಎರುತ್ತಿದ್ದರೆ ಹಣದುಬ್ಬರ ಉಂಟಾಗುತ್ತದೆ. ಇದೇ ಬೇಡಿಕೆ–ಎಳೆತ ಹಣದುಬ್ಬರ. ಏಕೆಂದರೆ ಅಗಾಧವಾಗಿ ಏರುತ್ತಿರುವ ಬೇಡಿಕೆಯು ಬೆಲೆಗಳನ್ನು ಮೇಲಕ್ಕೆ ಎಳೆಯುತ್ತದೆ.

೨. **ವೆಚ್ಚ–ತಳ್ಳಿದ ಹಣದುಬ್ಬರ:** ಕೆಲವು ಸಂದರ್ಭಗಳಲ್ಲಿ ವೆಚ್ಚ ಹಾಗೂ ಉತ್ಪಾದನಾಂಗಗಳ ಬೆಲೆಯ ಹೆಚ್ಚಳದಿಂದ ಬೆಲೆ ಏರಿಕೆ ತಲೆದೋರುವುದು. ಉತ್ಪಾದನ ವೆಚ್ಚ ಏರುವುದರಿಂದ ಹೆಚ್ಚಿನ ಬೆಲೆಯನ್ನು ನಿರ್ಧರಿಸಲೇಬೇಕಾಗುತ್ತದೆ. ಉದ್ಯಮಿಗಳು ಹೆಚ್ಚು ಲಾಭದ ದರವನ್ನು ನಿಗದಿಪಡಿಸಿ ಸರಕುಗಳ ಮಾರಾಟದಲ್ಲಿ ತೊಡಗಿದಾಗಲೂ ಬೆಲೆಗಳು ಏರುತ್ತವೆ. ಸರ್ಕಾರವು ಹೊಸ ತೆರಿಗೆಗಳನ್ನು ವಿದಿಸುವಿಕೆ ಹಾಗೂ ಅಸ್ತಿತ್ವದಲ್ಲಿರುವ ತೆರಿಗೆಗಳ ದರವನ್ನು ಹೆಚ್ಚಿಸುವಿಕೆಯು ಉತ್ಪಾದನಾ ವೆಚ್ಚವನ್ನು ಏರಿಸುವ ಮೂಲಕ ಬೆಲೆಯ ಹೆಚ್ಚಳದಲ್ಲಿ ಪರಿಣಮಿಸುತ್ತದೆ.

ಹಣದುಬ್ಬರ ತೀವ್ರತೆಯನ್ನು ಆಧರಿಸಿ ಅದರಲ್ಲಿ ಇನ್ನೊಂದು ವಿಭಜನೆಯನ್ನು ಕಾಣಬಹುದು. ಈ ವಿಭಜನೆಗೆ ಅನುಗುಣವಾಗಿ ಹಣದುಬ್ಬರದ ವಿಧಗಳು ಕೆಳಕಂಡಂತಿವೆದ:

೧. **ತೆವಳುವ ಹಣದುಬ್ಬರ**: ಬೆಲೆಗಳು ಅತಿ ನಿಧಾನವಾಗಿ, ಬಹಳ ಕಡಿಮೆ ದರದಲ್ಲಿ ಏರುತ್ತಿದ್ದರೆ ಅದಕ್ಕೆ ತೆವಳುವ ಹಣದುಬ್ಬರವೆಂದು ಹೆಸರು. ಹಣದುಬ್ಬರದ ಪ್ರಾರಂಭದ ಕಾಲದಲ್ಲಿ ಇಂತಹ ಸನ್ನಿವೇಶಗಳನ್ನು ಗಮನಿಸಬಹುದು.

೨. **ನಡೆಯುತ್ತಿರುವ ಹಣದುಬ್ಬರ:** ಹಣದುಬ್ಬರ ಪ್ರಾರಂಭವಾದ ಸ್ವಲ್ಪ ಸಮಯದ ನಂತರ ಬೆಲೆಗಳು ಸ್ವಲ್ಪ ಹೆಚ್ಚಿನ ದರದಲ್ಲಿ ಏರುತ್ತಿರುವುದು ಗೋಚರಿಸತೊಡಗುತ್ತದೆ.

೩. **<u>ಓಡುತ್ತಿರುವ ಹಣದುಬ್ಬರ</u>:** ಕಾಲಕ್ರಮೇಣ ಬೆಲೆಗಳ ಏರಿಕೆಯ ದರವು ಬಹಳ ತೀವ್ರವಾಗುತ್ತದೆ. ಅದು ಅತಿಪ್ರಸರನವು ಅನಿಯಂತ್ರಿತವಾಗುವ ಸೂಚನೆಗಳನ್ನು ತೋರಿಸುತ್ತದೆ. ಬೆಲೆಗಳು ನಿರಂತರವಾಗಿ, ಅಪಾಯಕಾರಿ ಮಟ್ಟದಲ್ಲಿ ಏರುವ ಸನ್ನಿವೇಶವೇ ಓಡುತ್ತಿರುವ ಹಣದುಬ್ಬರವಾಗಿದೆ.

೪. **<u>ನಾಗಾಲೋಟದ ಹಣದುಬ್ಬರ:</u>** ಬೆಲೆಗಳು ಬಹಳ ಹೆಚ್ಚಿನ ದರದಲ್ಲಿ, ಎಲ್ಲ ನಿಯಂತ್ರಣ ವಿಧಾನಗಳನ್ನು ಮೀರಿ ರಭಸವಾಗಿ ಎರುತ್ತಿರುವ ಸ್ಥಿತಿಯೇ ನಾಗಾಲೋಟದ ಹಣದುಬ್ಬರ. ಜರ್ಮನಿಯಲ್ಲಿ ೧೯೨೩-೨೪ ಅವಧಿಯಲ್ಲಿ ಸಂಭವಿಸಿದ ಬೆಲೆ ಏರಿಕೆಯು ನಾಗಾಲೋಟದ ಹಣದುಬ್ಬರಕ್ಕೆ ಉತ್ತಮ ಉದಾಹರಣೆಯಾಗಿದೆ.

ಹಣದುಬ್ಬರದ ನಿಯಂತ್ರಣ ಅಥವಾ ಅನಿಯಂತ್ರಣದ ಮೇರಿಗೆ ಅದನ್ನು ಮತ್ತೂ ಒಂದು ಪ್ರಕಾರ ವರ್ಗೀಕರಿಸಬಹುದು. ಈ ಪ್ರಕಾರದಲ್ಲಿ ಎರಡು ರೀತಿಯ ಹಣದುಬ್ಬರಗಳನ್ನು ಗಮನಿಸಬಹುದು:

೧. **<u>ತೆರೆದ ಹಣದುಬ್ಬರ:</u>** ಸರ್ಕಾರದ ನಿಯಂತ್ರಂಕ್ಕೆ ಒಳಗಾಗದೆ ಬೆಲೆಗಳು ಏರುವ ಸ್ಥಿತಿಗೆ ತೆರೆದ ಹಣದುಬ್ಬರವೆಂದು ಕರೆಯಲಾಗುತ್ತದೆ. ಇಲ್ಲಿ ಬೆಲೆ ಏರಿಕೆಯನ್ನು ಹತೋಟಿಯಲ್ಲಿಡಲು ಸರ್ಕಾರವು ಯಾವುದೇ ನಿಯಂತ್ರಣ ಕ್ರಮವನ್ನು ಅನುಸರಿಸುವುದರಿಂದ ಬೆಲೆಗಳು ಮುಕ್ತವಾಗಿ ಏರುತ್ತವೆ.

೨. **<u>ಹತ್ತಿಕ್ಕದ ಹಣದುಬ್ಬರ:</u>** ಸರ್ಕಾರದ ಬೆಲೆ ನಿಯಂತ್ರಣ ಕ್ರಮಗಳ ಮೂಲಕ ಹತೋಟಿಗೆ ಒಳಗಾದ ಬೆಲೆ ಏರಿಕೆಗೆ ಹತ್ತಿಕ್ಕದ ಹಣದುಬ್ಬರವೆಂದು ಹೆಸರು. ಬೆಲೆಗಳ ಏರಿಕೆಗೆ ಸೂಕ್ತ ಅವಕಾಶಗಳಿದ್ದರೂ ಸರ್ಕಾರದ ಕ್ರಮಗಳಿಂದ ಅದು ನಿಯಂತ್ರಿಸಲ್ಪಟ್ಟಿರುತ್ತಿದೆ.

**<u>ಹಣದುಬ್ಬರದ ಕಾರಣಗಳು:</u>**

ಬೇಡಿಕೆಯ ಹೆಚ್ಚಳಕ್ಕೆ ಕಾರಣವಾಗುವ ಸಂಗತಿಗಳು:

೧. ಹಣದ ಪೂರೈಯ ಹೆಚ್ಚಳ
೨. ವ್ಯಯ ಮಾಡಬಹುದಾದ ಆದಾಯಗಳ ಏರಿಕೆ
೩. ವೇತನಗಳು ಮತ್ತು ಭತ್ಯೆಗಳ ಹೆಚ್ಚಳ
೪. ಉದ್ಯಮಿಗಳು ಮತ್ತು ಅನುಭೋಗಿಗಳ ವೆಚ್ಚದ ಅಧಿಕೃತೆ
೫. ಸರ್ಕಾರಿ ವೆಚ್ಚ ಮತ್ತು ಖಾಸಗಿ ಹೂಡಿಕೆಯ ಹೆಚ್ಚಿಕೆ
೬. ಸ್ವದೇಶಿ ಸರಕುಗಳ ಮತ್ತು ಸೇವೆಗಳಿಗೆ ಹೆಚ್ಚಿನ ವಿದೇಶಿ ಬೆಡಿಕೆ
೭. ಜನಸಂಖ್ಯಾ ಬಾಹುಳ್ಯ

ಈ ಸಂಗತಿಗಳೆಲ್ಲವೂ ಸಂಯೋಜಿತವಾಗಿ ಅಥವ ಬಿಡಿ ಬಿಡಿಯಾಗಿ ಅತಿ ಪ್ರಸರಣದ ಸೃಷ್ಟಿ ಮತ್ತು ಬೆಳವಣಿಗೆಗೆ ಕಾರಣವಾಗಬಹುದು.

**<u>ಪೂರೈಕೆಯ ಕೊರತೆಗೆ ಕಾರಣವಾಗುವ ಸಂಗತಿಗಳು:</u>**

ತಗ್ಗಿದ ಉತ್ಪಾದನೆ ಮತ್ತು ಸರಕುಗಳು ಕೃತಕ ಅಭಾವದಿಂದ ಪೂರೈಕೆಯ ಕೊರತೆ ಸಂಭವಿಸಿರುತ್ತದೆ. ಇದಕ್ಕೆ ಕಾರಣವಾಗುವ ಸಂಗತಿಗಳು ಕೆಳಕಂಡಂತಿವೆ.

೧. ಬಂಡವಾಳ, ಯಂತ್ರೋಪಕರಣಗಳು, ಕಚ್ಚಾ ಸರಕುಗಳು, ಶ್ರಮ ಮುಂತಾದ ಸಂಪನ್ಮೂಲಗಳ ಕೊರತೆ.

೨. ಉತ್ಪಾದಕರು ಹಾಗು ವರ್ತಕರು ಸಟ್ಟಾ ವ್ಯಾಪಾರ, ದಾಸ್ತಾನುಗಾರಿಕೆ, ಲಾಭ ಕೊರತನದಲ್ಲಿ ಅತಿಯಾಗಿ ತೊಡಗಿ ಕೃತಕ ಅಭಾವವನ್ನು ಸೃಷ್ಟಿಸುವಿಕೆ.
೩. ಕೃಷಿ ಉತ್ಪಾದನೆಗೆ ಮಾರಕವಾಗುವಂತಹ ಬರಗಾಲ, ಕ್ಷಾಮ, ಪ್ರವಾಹ ಮೊದಲಾದ ಪ್ರಾಕೃತಿಕ ವಿಪ್ಪತ್ತುಗಳ ಸಂಭವಿಸುವಿಕೆ.
೪. ಸುದೀರ್ಘ ಕೈಗಾರಿಕಾ ಅಶಾಂತಿಯ ಪರಿಣಾಮವಾಗಿ ಕೈಗಾರಿಕೋತ್ಪನ್ನದ ಕುಸಿತ.
೫. ರಫ್ತು ಹೆಚ್ಚಳದ ಪರಿಣಾಮವಾಗಿ ಸರಕುಗಳ ವಿದೇಶಿ ಲಭ್ಯತೆಯ ಅಭಾವ.

## ಹಣದುಬ್ಬರದ ಪರಿಣಾಮಗಳು:

ಹಣದಬ್ಬರವು ಆರ್ಥಿಕ ಪ್ರಗತಿ ಮತ್ತು ಸ್ಥಿಮಿತತೆಗೆ ಬಹಳ ಅಪಾಯಕಾರಿಯಾದುದು. ಬೆಲೆ ಏರಿಕೆಯು ಎಲ್ಲಾ ವರ್ಗಗಳ ಜನರನ್ನು ಬಾದಿಸುತ್ತದೆ. ಅದು ಉತ್ಪಾದನೆ ಮತ್ತು ವಿತರಣೆ ಎರಡರ ಮೇಲೂ ಪರಿಣಾಮ ಬೀರುತ್ತದೆ. ಇದು ಕೆಲವು ವರ್ಗಗಳ ಜನರಿಗೆ ಉಪಾಯಕಾರಿಯಾಗಬಹುದು. ಇನ್ನು ಕೆಲವು ವರ್ಗಗಳ ಜನರಿಗೆ ಹಾನಿಕಾರವಾಗಬಹುದು, ಅಲ್ಲದೆ ಕೆಲವು ವರ್ಗಗಳ ಜನರಿಗೆ ಹೆಚ್ಚು ಹಾನಿಕಾರಿಯಾಗಬಹುದು ಮತ್ತು ಉಳಿದ ವರ್ಗದ ಜನರಿಗೆ ಕಡಿಮೆ ಹಾನಿಕಾರಿಯಾಗಬಹುದು. ಹಣದುಬ್ಬರವು ಆರ್ಥಿಕ ಮತ್ತು ಸಾಮಾಜಿಕ ಪರಿಣಾವಗಳೆರಡನ್ನೂ ಒಳಗೊಂಡಿದೆ. ಉತ್ಪಾದನೆ ಮತ್ತು ವಿತರಣೆ ಮೇಲೆ ಹಣದುಬ್ಬರದ ಪರಿಣಾಮಗಳನ್ನು ತಿಳಿಯುವುದು ಸೂಕ್ತ.

**ಉತ್ಪಾದನೆಯ ಮೇಲೆ:** ಉತ್ಪಾದನೆಯ ಮೇಲೆ ಹಣದುಬ್ಬರವು ಪ್ರೋತ್ಸಾಹಕಾರಿ ಪರಿಣಾಮಗಳನ್ನು ಬೀರುತ್ತದೆ. ಬೆಲೆಗಳು ಏರುತ್ತಿರುವಾಗ ಉದ್ಯಮ ಲಾಭಗಳು ಹೆಚ್ಚುತ್ತವೆ. ಅರೆ ಬಳಕೆಯಾದ ಸಂಪನ್ಮೂಲಗಳನ್ನು ಬಳಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಲು ಅವಕಾಶ ಸಿಗುತ್ತದೆ. ಉದ್ಯೋಗ ಮತ್ತು ಆದಾಯ ಅಧಿಕಗೊಳ್ಳುತ್ತದೆ. ಉತ್ತಮ ಉದ್ಯಮ ಲಾಭಗಳ ಫಲವಾಗಿ ಹೂಡಿಕೆ ಏರುತ್ತದೆ. ಆದ್ದರಿಂದ ಸಾಮಾನ್ಯ ದರದ ಅತಿ ಪ್ರಸರಣವು ಉತ್ಪಾದನೆ ಮತ್ತು ರಾಷ್ಟ್ರೀಯ ಆದಾಯದ ಹೆಚ್ಚಳಕ್ಕೆ ಕೊಡುಗೆ ನೀಡುವುದರಿಂದ ಅದು ಆರ್ಥಿಕ ಪ್ರಗತಿಗೆ ಅತ್ಯಾವಶ್ಯಕವಾದ ಸಂಗತಿಯೆಂದು ಭಾವಿಸಲಾಗಿದೆ.

ಪೂರ್ಣೋದ್ಯೋಗ ಸ್ಥಪನೆಯಾಗಿ, ಎಲ್ಲಾ ಸಂಪನ್ಮೂಲಗಳೂ ಪೂರ್ಣವಾಗಿ ಬಳಕೆಯಾಗಿ, ಉತ್ಪಾದನೆಯು ಸ್ಥಗಿತಗೊಂಡ ನಂತರ ಸಂಭವಿಸುವ ಅತಿಪ್ರಸರಣವೂ ತೀರ ಅಪಾಯಕಾರಿ. ಅದರಲ್ಲಿಯು ಇಂತಹ ಸಂದರ್ಭದಲ್ಲಿ ಅಸಾಮಾನ್ಯ ದರದ ಬೆಲೆ ಏರಿಕೆ ಸಂಭವಿಸಿದರೆ ಸಾಧಿಸಿದ ಪ್ರಗತಿ ಮತ್ತು ಆರ್ಥಿಕ ಸ್ಥಿಮಿತತೆ ಛಿದ್ರಗೊಳ್ಳುತ್ತವೆ.

**ವಿತರಣೆಯ ಮೇಲೆ:** ವಿತರಣೆಯ ಮೇಲೆ ಹಣದುಬ್ಬರದ ಪರಿಣಾಮಗಳು ದೂರ ವ್ಯಾಪ್ತಿಯಾಗಿವೆ. ಎಲ್ಲಾ ಸರಕುಗಳ ಮತ್ತು ಸೇವೆಗಳ ಬೆಲೆಯ–ಕೃಷಿ ಬೆಲೆಗಳು, ಕೈಗಾರಿಕಾ ಬೆಲೆಗಳು, ಕಚ್ಚಾ ವಸ್ತುಗಳು ಮತ್ತು ಖನಿಜಗಳ ಬೆಲೆಗಳು, ಗೇಣಿ, ಕೂಲಿ, ಲಾಭಗಳು ಇತ್ಯಾದಿ ಒಂದೇ ದರದಲ್ಲಿ ಮತ್ತು ಒಂದೇ ದಿಕ್ಕಿನಲ್ಲಿ ಏರಿದರೆ ಯಾವ ವರ್ಗದ ಜನರ ಮೇಲು ದುಷ್ಪರಿಣಾಮವಾಗುವುದಿಲ್ಲ.

**ಉತ್ಪಾದಕ ವರ್ಗದ ಮೇಲೆ;** ಹಣದುಬ್ಬರವು ಉತ್ಪಾದಕ ವರ್ಗದ ಮೇಲೆ ಅಂದರೆ ಉದ್ಯಮಿಗಳು, ಕೃಷಿಕರು, ವರ್ತಕರು ಮತ್ತು ಸಟ್ಟಾ ವ್ಯಾಪಾರಿಗಳ ಮೇಲೆ ಉತ್ತೇಜನಕಾರಿ ಪರಿಣಾಮಗಳನ್ನು ಬೀರುತ್ತದೆ. ಬೆಲೆ ಏರಿಕೆಯ ಫಲವಾಗಿ ಲಾಭಗಳು ಅಧಿಕಗೊಂಡು ಉತ್ಪಾದನ ಕಾರ್ಯವು ವಿಸ್ತರಣೆಗೊಳ್ಳುತ್ತದೆ.

**<u>ಉದ್ಯಮ ವರ್ಗದವರ ಮೇಲೆ:</u>** ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗಿಗಳಾಗಿರುವ, ನಿಗದಿತ ಬಡ್ಡಿ ಹಾಗೂ ಗೇಣಿಯನ್ನು ಪಡೆಯುವ ಮತ್ತು ಹಳೆಯ ಉಳಿತಾಯಗಳ ಸಹಾಯದಿಂದ ಜೀವನ ನಡೆಸುವ ಜನರನ್ನು ಮಧ್ಯಮ ವರ್ಗ ಎಂದು ಪರಿಗಣಿಸಲಾಗಿದೆ. ಅವರ ಆದಾಯಗಳು ನಿಗದಿತವಾಗಿರುವುದರಿಂದ ಬೆಲೆ ಏರಿಕೆಯೊಡನೆ ಇರುವ ಜೀವನ ಮಟ್ಟ ಕುಸಿಯುತ್ತದೆ.

**<u>ಕಾರ್ಮಿಕ ವರ್ಗದ ಮೇಲೆ:</u>** ಕಾರ್ಮಿಕ ವರ್ಗದ ಮೇಲೆಯೂ ಹಣದುಬ್ಬರವು ದುಷ್ಪರಿಣಾಮಗಳನ್ನು ಬಿರುತ್ತದೆ. ವೆತನಗಳು ಮೊದಲೆ ನಿಗದಿಯಾಗಿರುವುದರಿಂದ ಬೆಲೆ ಏರಿಕೆಯೊಡನೆ ಅವರ ವೇತನಗಳೂ ಏರುವುದರಿಂದ ಕಾರ್ಮಿಕರ ಜೀವನ ಮಟ್ಟ ಕುಸಿಯುತ್ತದೆ. ಕಾಮಿಕರ ವೇತನಗಳು ಏರುವುದಾದರೂ ಅವು ಏರುತ್ತಿರುವ ಬೆಲೆಗಳ ದರದಲ್ಲಿಯೇ ಏರುವುದಿಲ್ಲ. ಅಲ್ಲದೆ ಬೆಲೆ ಏರಿಕೆ ಮತ್ತು ವೇತನದ ಏರಿಕೆಯ ನಡುವೆ ಗತಿವಿಲಂಬವಿರುವುದರಿಂದ ಈ ಅವಧಿಯಲ್ಲಿ ಕಾರ್ಮಿಕರು ದುರವಸ್ಥೆಗೀಡಾಗುತ್ತಾರೆ.

**<u>ಸಾಲಿಗರು ಮತ್ತು ಸಾಲಗಾರರ ಮೇಲೆ:</u>** ಹಣದುಬ್ಬರವು ಸಾಲಗಾರರ ಮೇಲೆ ಒಳ್ಳೆಯ ಪರಿಣಾಮಗಳನ್ನೂ ಸಾಲಿಗರ ಮೇಲೆ ಕೆಟ್ಟ ಪರಿಣಾಮವನ್ನೂ ಉಂಟುಮಾಡುತ್ತದೆ. ಸಾಲವು ಹಣದ ರೂಪದಲ್ಲಿ ನಿಗದಿಯಾಗಿರುತ್ತದೆ. ಒಂದು ನಿರ್ದಿಷ್ಟ ಮೊತ್ತವನ್ನು ಸಾಲ ಪಡೆದು ಅದನ್ನು ಮರುಪಾವತಿ ಮಾಡುವ ಸಮಯದಲ್ಲಿ ಬೆಲೆಗಳು ಏರುತ್ತಿದ್ದರೆ ಸಾಲಿಗರಿಗೆ ನಷ್ಟವಾಗುತ್ತದೆ. ಏಕೆಂದರೆ ಈಗ ಹಣದ ಮೌಲ್ಯ ಇಳಿದಿರುವುದರಿಂದ ಸಾಲ ನೀಡಿದಾಗ ಇದ್ದ ಕೊಳ್ಳುವ ಶಕ್ತಿ ಈಗ ಇರುವುದಿಲ್ಲ. ಬದಲಾಗಿ ಬೆಲೆ ಏರಿಕೆಯು ಸಾಲಗಾರರಿಗೆ ಲಾಭದಾಯಕವಾಗುತ್ತದೆ. ಏಕೆಂದರೆ ಸಾಲದ ಹಣವನ್ನು ಅವರ ಹಣದ ಮೌಲ್ಯ ಹೆಚ್ಚಾಗಿದ್ದಾಗ ಬಳಸಿಕೊಂಡಿರುತ್ತದೆ. ಈಗ ಹಣದ ಕೊಳ್ಳವ ಶಕ್ತಿಯ ಕುಸಿತದಿಂದ ಅವರಿಗೆ ಏನೂ ನಷ್ಟವಾಗುವುದಿಲ್ಲ.

## <u>ಹಣದುಬ್ಬರ ನಿಯಂತ್ರಣ:</u>

ಪ್ರಗತಿಗೆ ಮಾರಕವಾಗಿ, ಅಪಾಯಕಾರಿ ದರದಲ್ಲಿ ಬೆಳೆಯುತ್ತಿರುವ ಹಣದುಬ್ಬರವನ್ನು ನಿಯಂತ್ರಿಸದ ಹೊರತು ಆರ್ಥಿಕಾಭಿವೃದ್ಧಿಯ ಸಾಧನೆ ಮತ್ತು ಆರ್ಥಿಕ ಸ್ಥಿಮಿತತೆಯ ಕಾಪಾಡುವಿಕೆ ಪೂರ್ಣವಾಗಿ ಅಸಂಭವಾಗುತ್ತವೆ. ಹಣದುಬ್ಬರವನ್ನು ಪ್ರಾರಂಬದ ಹಂತದಲ್ಲಿಯೆ ಹತೋಟಿಗೆ ತರುವುದು ಅವಶ್ಯಕ. ಇಲ್ಲದಿದ್ದರೆ ಅದು ಬಲವಾಗಿ ಬೆರೂರಿದ ನಂತರ ಅದರ ನಿಯಂತ್ರಣ ಅಸಾಧ್ಯವಾಗಬಹುದು.

ಹಣದುಬ್ಬರದ ಹತೋಟಿಯ ಕ್ರಮಗಳು, ಅಂದರೆ ಹಣದುಬ್ಬರ ವಿರೋಧಿ ಕ್ರಮಗಳು, ಪ್ರಮುಖವಾಗಿ ನಾಲ್ಕು ಅವೆಂದರೆ: ೧. ಹಣಕಾಸಿನ ಕ್ರಮಗಳು, ೨. ರಾಜ್ಯ ಕೋಶ ಕ್ರಮಗಳು, ಭೌತಿಕ ಕ್ರಮಗಳು ಮತ್ತು ೪. ನಿಯಂತ್ರಣ ಕ್ರಮಗಳು.

೧. ಹಣದ ಪರಿಮಾಣ ಮತ್ತು ಚಲಾವಣೆಯ ಗತಿಯನ್ನು ನಿಯಂತ್ರಿಸುವುದು. ಇದಕ್ಕಾಗಿ ಕೇಂದ್ರ ಬ್ಯಾಂಕು ತುಟ್ಟಿ ಹಣದ ನೀತಿಯನ್ನು ಅನುಸರಿಸಬೇಕಾಗುತ್ತದೆ. ಅಂದರೆ ಬಡ್ಡಿ ದರವನ್ನು ಹೆಚ್ಚು ಮಾಡಬೇಕಾಗುತ್ತದೆ. ಜೊತೆಗೆ ವಾಣಿಜ್ಯ ಬ್ಯಾಂಕುಗಳು ನೀಡುವ ಸಾಲಗಳ ಮೇಲೆ ನಿಯಂತ್ರಣವನ್ನು ಹೊಂದುವುದು. ಎಲ್ಲಾ ಪರಿಮಾಣಾತ್ಮಕ ಹಾಗೂ ಆಯ್ದ ಸಾಲ ನಿಯಂತ್ರಣಗಳನ್ನು ಜಾರಿಗೆ ತರುವುದು.

೨. ರಾಜ್ಯ ಕೋಶ ನೀತಿಯಲ್ಲಿ ಸರ್ಕಾರ ತೆರಿಗೆ ಮತ್ತು ಸಾರ್ವಜನಿಕ ವೆಚ್ಚಗಳಲ್ಲಿ ಹೊಂದಾಣಿಕೆ ಮಾಡಬೇಕು, ಅಂದರೆ ತೆರಿಗೆಗಳನ್ನು ಹೆಚ್ಚಿಸಿ ತಾನು ಕಡಿಮೆ ಖರ್ಚು ಮಾಡುವುದು, ಕೊರತೆ ಹಣಕಾಸನ್ನು ನಿಯಂತ್ರಿಸುವುದು, ಆಡಳಿತಾತ್ಮಕ ವೆಚ್ಚಗಳನ್ನು ತಗ್ಗಿಸುವುದು.

೩. ಬೌತಿಕ ಕ್ರಮಗಳಲ್ಲಿ ಬೇಡಿಕೆಯನ್ನು ತಗ್ಗಿಸಿ ಪೂರೈಕೆಯ ನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಬೇಕು.

೪. ಆಡಳಿತಾತ್ಮಕ ಬೆಲೆ ನಿರ್ಣಯಗಳು.

೫. ಪಡಿತರ ವ್ಯವಸ್ಥೆ ಜಾರಿ.

೬. ಕಳ್ಳ ದಾಸ್ಥಾನು ತಡೆಗಟ್ಟುವುದು ಹಾಗೂ ಸಟ್ಟಾ ವ್ಯಾಪಾರವನ್ನು ನಿಯಂತ್ರಿಸುವುದು.

೭. ವಿದೇಶಗಳಿಂದ ಆಮದು ಮಾಡಿಕೊಳ್ಳುವುದು.

# ಆರ್ಥಿಕ ಚಟುವಟಿಕೆಗಳಲ್ಲಿ ಏರಿಳಿತಗಳು
# (Fluctuations in Business Activities)

ಸಾಮಾನ್ಯವಾಗಿ ಎಲ್ಲಾ ರಾಷ್ಟ್ರಗಳಲ್ಲಿ ವರಮಾನ, ಉದ್ಯೋಗ ಮತ್ತು ಉತ್ಪನ್ನಗಳಲ್ಲಿ, ಅಂದರೆ ಆರ್ಥಿಕ ಚಟುವಟಿಕೆಗಳಲ್ಲಿ ಏರಿಳಿತಗಳುಂಟಾಗುತ್ತಲೇ ಇರುತ್ತವೆ. ಆರ್ಥಿಕ ಚಟುವಟಿಕೆಗಳಲ್ಲಿ, ಮುಖ್ಯವಾಗಿ ಅನುಭೋಗ ಮತ್ತು ಉತ್ಪಾದನೆಗಳಲ್ಲಿ ಸಾಮರಸ್ಯವಿಲ್ಲದಿರುವುದರಿಂದ ಈ ರೀತಿಯ ಏರಿಳಿತಗಳುಂಟಾಗುತ್ತವೆ. ಕೆಲವೊಮ್ಮೆ ಏರಿಳಿತಗಳು ಸೌಮ್ಯವಾಗಿದ್ದರೆ ಕೆಲವೊಮ್ಮೆ ವಿಪತ್ಕಾರಕವಾಗಿರುತ್ತವೆ. ಉದ್ಯೋಗ, ಉತ್ಪನ್ನ, ಬೆಲೆ, ವರಮಾನ, ಬಡ್ಡಿ, ಲಾಭ ಇತ್ಯಾದಿಗಳಲ್ಲಿ ಏಳುಬೀಳುಗಳು ಆರ್ಥಿಕ ಪ್ರಗತಿಯ ಹಾದಿಯಲ್ಲಿ ಸ್ವಾಭಾವಿಕವಾಗಿತ್ತವೆ, ಆರ್ಥಿಕತೆಯಲ್ಲಿ ಸ್ಥಿಮಿತತೆ ಕಾಪಾಡಲು ಈ ಸಮಸ್ಯೆಗಳ ಪರಿಹಾರವಾಗಬೇಕು. ಅದಕ್ಕಾಗಿ ಆಧುನಿಕ ರಾಷ್ಟ್ರಗಳು ಸರಿಯಾದ ಆರ್ಥಿಕ ನೀತಿಯನ್ನು ರೂಪಿಸಿಕೊಳ್ಳುತ್ತವೆ.

## ವ್ಯಾಪಾರ ಚಕ್ರಗಳು (Trade Cycles):

ಆರ್ಥಿಕತೆಯಲ್ಲಿ ಒಮ್ಮೊಮ್ಮೆ ಚೇತರಿಕೆ ಮತ್ತು ಒಮ್ಮೊಮ್ಮೆ ಮುಗ್ಗರಿಸುವಿಕೆ ಉಂಟಾಗುತ್ತವೆ. ಈ ರೀತಿಯ ಆರ್ಥಿಕ ವರ್ತನೆಯನ್ನು ವ್ಯಾಪಾರ ಚಕ್ರ ಅಥವ ಆರ್ಥಿಕ ಆವರ್ತ ಎಂದು ಕರೆಯಲಾಗುತ್ತದೆ. ಸಮಗ್ರ ಆರ್ಥಿಕ ವ್ಯವಹಾರಗಳ ವಿಸ್ತರಣೆ ಅಥವಾ ಸಂಕುಚಿತತೆಯನ್ನು ವ್ಯಾಪಾರ ಚಕ್ರ ಎಂದು ಕರೆಯಲಾಗುತ್ತದೆ. ವ್ಯಾಪಾರ ಚಕ್ರವೆಂದರೆ ಸಮಗ್ರ ಉತ್ಪನ್ನ, ಉದ್ಯೋಗ ಮತ್ತು ವರಮಾನಗಳಲ್ಲಿ ಆಗಾಗ ಏರಿಳಿತಗಳುಂಟಾಗುವುದು. ಮಿಟ್ಚೆಲನ ಪ್ರಕಾರ "ಆರ್ಥಿಕ ಆವರ್ತಗಳು ಸಂಘಟಿತ ಸಮುದಾಯಗಳ ಆರ್ಥಿಕ ಚಟುವಟಿಕೆಗಳಲ್ಲಿನ ಏರಿಳಿತಗಳು", ಅವನ ಅಭಿಪ್ರಾಯದಂತೆ ಆರ್ಥಿಕ ಆವರ್ತಗಳು:

೧. ಹಣ ಚಲಾವಣೆಯಲ್ಲಿರುವ ಸಂಘಟಿತ ಸಮಾಜದಲ್ಲಿ ಮಾತ್ರ ಉಂಟಾಗುತ್ತವೆ.
೨. ಆರ್ಥಿಕ ಪರಿಸ್ಥಿತಿಗಳ ಏರಿಳಿತ ಮತ್ತು ಬದಲಾವಣೆಗೆ ಅನ್ವಯವಾಗುತ್ತವೆ.
೩. ವ್ಯವಸ್ಥಿತ ಮತ್ತು ನಿಯತ ಕಾಲಿಕವಾಗಿ ಔದ್ಯಮಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಾಗುವ ಬದಲಾವಣೆಯನ್ನು ಸೂಚಿಸುತ್ತವೆ.

ಆರ್ಥಿಕ ಆವರ್ತಗಳೆಂದರೇನೆಂದು ಕೇನ್ಸ್ ಈ ಮಾತುಗಳಲ್ಲಿ ವಿವರಿಸುತ್ತನೆ: "ಒಂದು ವ್ಯಾಪಾರಿ ಚಕ್ರವು ಏರುವ ಬೆಲೆ ಮತ್ತು ಕಡಿಮೆ ನಿರುದ್ಯೋಗ ಪ್ರಮಾಣ – ಈ ಲಕ್ಷಣಗಳುಳ್ಳ ಒಳ್ಳೆಯ ವ್ಯಾಪಾರಾವಧಿಯಿಂದ, ಹಾಗೂ ಇಳಿಯುವ ಬೆಲೆ ಮತ್ತು ಅಧಿಕ ನಿರುದ್ಯೋಗ ಪ್ರಮಾಣ – ಈ ಲಕ್ಷಣಗಳುಳ್ಳ ಕೆಟ್ಟ ವ್ಯಾಪಾರಾವಧಿಯಿಂದ ರಚಿಸಲ್ಪಟ್ಟಿದೆ". ಫ್ರೆಡೆರಿಕ್ ಬೆನ್ ಹಾಂನ ವ್ಯಾಖ್ಯೆ ಹೀಗಿದೆ: ಒಂದು ವ್ಯಾಪಾರ ಚಕ್ರವನ್ನು ಮುಗ್ಗಟ್ಟಿನ ಅವಧಿಯಿಂದ ಹಿಂಬಾಲಿಸಲ್ಪಡುವ ಚೇತರಿಕೆಯ ಅವಧಿ ಎಂದು ಸ್ವಲ್ಪ ಕೆಟ್ಟದಾಗಿ, ವ್ಯಾಖ್ಯಾನಿಸಬಹುದು ವ್ಯಾಪಾರ ಕೆಲವೊಮ್ಮೆ ಕೆಟ್ಟಾಗಿಯೂ, ಕೆಲವೊಮ್ಮೆ ಒಳ್ಳೆಯದಾಗಿಯು ಇದ್ದು ಆರ್ಥಿಕ ರಿತಿಯು ಅವ್ಯವಸ್ಥಿತವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ". ಮೇಲಿನ ವ್ಯಾಖ್ಯೆಗಳಿಂದ ವ್ಯಾಪಾರಿ ಚಕ್ರವು ಚೇತರಿಕೆ ಮತ್ತು ಮುಗ್ಗಟ್ಟುಗಳೆಂಬ

ಅವಧಿಗಳು ಲಯ ಬದ್ಧವಾಗಿ ಪದೇ ಪದೇ ಉಂಟಾಗುವ ಆರ್ಥಿಕ ಏರಿಳಿತಗಳಾಗಿವೆ. ಹೀಗೆ ಆರ್ಥಿಕ ಆವರ್ತಗಳು ಆರ್ಥಿಕ ಚಟುವಟಿಕೆಗಳ ಪಥವನ್ನು ವಿವರಿಸುತ್ತವೆ.

**ಆವರ್ತಗಳ ಲಕ್ಷಣಗಳು:**

ಅಮೇರಿಕನ್ ಎಕನಾಮಿಕ್ ಅಸೋಸಿಯೇಷನ್ ವ್ಯಾಪಾರ ಚಕ್ರಕ್ಕೆ ಈ ಕೆಳಗಿನ ಲಕ್ಷಣಗಳಿವೆಯೆಂದು ಹೇಳುತ್ತದೆ:

೧. ಬೆಲೆ ಮತ್ತು ಉತ್ಪಾದನೆ ಆಗಾಗ ಹೆಚ್ಚಾಗುತ್ತದೆ ಮತ್ತು ಕಡಿಮೆಯಾಗುತ್ತದೆ, ಕೃಷಿಯೊಂದೇ ಈ ಹೇಳಿಕೆಗೆ ಅಪವಾದ.
೨. ಬಂಡವಾಳ ಸರಕುಗಳ ಉದ್ಯಮದಲ್ಲಿ, ಅನುಭೋಗ ಸರಕುಗಳ ಉದ್ಯಮಕ್ಕಿಂತ ಅಧಿಕವಾಗಿ ಉತ್ಪನ್ನ ಮತ್ತು ಉದ್ಯೋಗಗಳಲ್ಲಿ ಏರಿಳಿತಗಳುಂಟಾಗುತ್ತವೆ.
೩. ಸಮಗ್ರ ಉತ್ಪನ್ನ, ಉದ್ಯೋಗ ಮತ್ತು ಬೆಲೆಗಳ ಬೃಹತ್ ಬದಲಾವಣೆಯ ಕರೆನ್ಸಿ, ಸಾಲ ಮತ್ತು ಹಣ ಚಲಾವಣೆಯ ಬೃಹತ್ ಬದಲಾವಣೆಯೊಂದಿಗಿರುತ್ತದೆ.
೪. ತುಲನಾತ್ಮಕವಾಗಿ ಕೈಗಾರಿಕೋತ್ಪನ್ನಗಳ ಬೆಲೆಯಲ್ಲಿ ಹೆಚ್ಚು ಬದಲಾವಣೆ ಉಂಟಾಗುತ್ತದೆ.
೫. ಲಾಭದ ಏರಿಳಿತಗಳು, ಆದಾಯದ ಉಳಿದ ವಿಧಿಗಳ ಬದಲಾವಣೆಗಿಂತ ಅಧಿಕವಾಗಿರುತ್ತವೆ.
೬. ಕೈಗಾರಿಕೆಗಳು ಹೇಗೆ ಪರಸ್ಪರ ಸಂಬಂಧ ಹೊಂದಿವೆಯೆಂದರೆ ಒಂದರಲ್ಲಿನ ಏರಿಳಿತದಿಂದ ಉಳಿದ ಕೈಗಾರಿಗಳಲ್ಲಿ ಏರಿಳಿತಗಳುಂಟಾಗುತ್ತವೆ.
೭. ವ್ಯಾಪಾರ ಚಕ್ರಗಳು ಸಾಂಕ್ರಾಮಿಕ ರೋಗ ಇರುವಂತೆ. ಅವು ಒಂದು ದೇಶದಿಂದ ಇನ್ನೊಂದಕ್ಕೆ ವಿದೇಶ ವ್ಯಾಪಾರದಿಂದ ಹರಡುತ್ತವೆ.

ವ್ಯಾಪಾರ ಚಕ್ರದ ಎರಡು ಮುಖ್ಯ ಹಂತಗಳೆಂದರೆ ಅತಿಪ್ರಸರಣದ ಅವಧಿ ಮತ್ತು ಅನಪ್ರಸರಣದ ಅವಧಿಗಳು. ಅತಿಪ್ರಸರಣದಲ್ಲಿ ಬೆಲೆ, ಆದಾಯ, ಉತ್ಪನ್ನ, ಉದ್ಯೋಗ, ಹೂಟೆ, ಲಾಭ ಇಲ್ಲವೂ ಹೆಚ್ಚಿರುತ್ತವೆ. ಅನುಪ್ರಸರಣದಲ್ಲಿ ಬೆಲೆ, ಆದಾಯ, ಉತ್ಪನ್ನ, ಉದ್ಯೋಗ, ಹೂಟೆ, ಲಾಭ – ಇವೆಲ್ಲ ತುಂಬಾ ಕಡಿಮೆ ಇರುತ್ತವೆ.

ಪ್ರಾಧ್ಯಾಪಕ ಜೇಮ್ಸ್ ಆರ್ಥರ್ ಈಸ್ಟೀ ಆರ್ಥಿಕ ಆವರ್ತಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿದ್ದಾನೆ:

೧. ಪ್ರಧಾನ ಮತ್ತು ಅಪ್ರಧಾನ ಆವರ್ತಗಳು
೨. ಕಟ್ಟಡದ ಆವರ್ತಗಳು
೩. ದೀರ್ಘಾವಧಿ ಆವರ್ತ್ಗಲು.

ಪ್ರಧಾನ ಅವಧಿ ಹೆಚ್ಚೆಂದರೆ ಹತ್ತು ವರ್ಷಗಳು. ಪ್ರಧಾನ ಆವರ್ತಗಳ ಬಗ್ಗೆ ಫ್ರೆಂಚ್ ವಿಜ್ಞಾನಿ ಕ್ಲೆಮೆಂಟ್ ಜುಗ್ಲಾರ್ ವಿಶ್ಲೇಷಣೆ ನಡೆಸಿದುದರಿಂದ ಅವುಗಳನ್ನು ಜುಗ್ಲಾರ್ ಆವರ್ತಗಳೆಂದು ಕರೆಯಲಾಗುತ್ತದೆ. ಅಪ್ರಧಾನ ಆವರ್ತಗಳ ಅವಧಿ ನಲವತ್ತು ತಿಂಗಳುಗಳು. ಅಪ್ರಧಾನ ಆವರ್ತಗಳ ಬಗ್ಗೆ ವಿಶೇಷ ಅಧ್ಯಯನವನ್ನು ಪ್ರಾಧ್ಯಾಪಕ ಕಿಚನ್ ನಡೆಸಿದುದರಿಂದ ಅವುಗಳಿಗೆ ಕಿಚನ್ ಆವರ್ತ ಎಂಬ ಹೆಸರಿದೆ. ಅಪ್ರಧಾನ ಆವರ್ತಗಳು ಆರ್ಥಿಕತೆಯಲ್ಲಿ ತೀರ ಸೌಮ್ಯ ಪರಿಣಾಮಗಳನ್ನುಂಟು ಮಾಡಿದರೆ ಪ್ರಧಾನ ಆವರ್ತಗಳು ಭೀಕರ ಪರಿಣಾಮವುಂಟುಮಾಡುತ್ತವೆ. ಕಟ್ಟಡಗಳ ಉದ್ಯಮದಲ್ಲಿ

ಏರಿಳಿತಗಳಾದರೆ ಅದನ್ನು ಕಟ್ಟಡ ಆವರ್ತ ಎಂದು ಕರೆಯಲಾಗುತ್ತದೆ. ಕಟ್ಟಡ ಆವರ್ತದ ಅವಧಿ ಹದಿನೈದರಿಂದ ಇಪತ್ತು ವರ್ಷಗಳು. ಪ್ರಧಾನ ಆವರ್ತಗಳ ದುಪ್ಪಟ್ಟು ಕಾಲಾವಧಿ ಕಟ್ಟಡದ ಆವರ್ತಕ್ಕಿದೆ. ದೀರ್ಘಾವಧಿಯ ಆವರ್ತಗಳನ್ನು ಕಂಡುಹಿಡಿದಾತ ರಷ್ಯಾದ ಅರ್ಥಶಾಸ್ತ್ರಜ್ಞನಾದ ಕಾಂಡ್ರಾ ಟೀಫ್, ಎಂಬಾತ ಆದುದರಿಂದ ದೀಘಾವಧಿಯ ಆವರ್ತಗಳಿಗೆ ಕಾಂಡ್ರಾಟೀಫ್ ಆವರ್ತಗಳೆಂದು ಹೆಸರು. ಅವುಗಳು ಅವಧಿ ಐವತ್ತರಿಂದ ಅರವತ್ತು ವರ್ಷಗಳು. ಸಾಮಾನ್ಯವಾಗಿ ನಾವು ಪ್ರಧಾನ ಮತ್ತು ಅಪ್ರಧಾನ ಆವರ್ತಗಳನ್ನು ಕಾಣಬಹುದೇ ವಿನಾ ಕಟ್ಟಡ ಮತ್ತು ದೀರ್ಘಾವಧಿಯ ಆವರ್ತಗಳನ್ನು ಕಾಣೂವುದು ಕಷ್ಟ ಸಾಧ್ಯ.

**ಆರ್ಥಿಕ ಆವರ್ತದ ವಿವಿಧ ಹಂತಗಳು (Phases of business Cycles):**

ಸ್ಥೂಲವಾಗಿ ಒಂದು ಆರ್ಥಿಕ ಆವರ್ತದಲ್ಲಿ ಕೆಳಗಿನ ಹಂತ ಮತ್ತು ಮೇಲಿನ ಹಂತ ಎಂಬ ಎರಡು ಹಂತಗಳಿವೆ. ಸೂಕ್ಷ್ಮವಾಗಿ ಒಂದು ಮಾದರಿ ಆರ್ಥಿಕ ಆವರ್ತವು – ಬಿಕ್ಕಟ್ಟು, ಚೇತರಿಕೆ, ಉತ್ಕರ್ಷ, ವಿಸ್ತರಣೆ ಮತ್ತು ಹಿಂಜರಿತ – ಈ ಐದು ಹಂತಗಳನ್ನು ಒಳಗೊಂಡಿರುತ್ತದೆ. ಆರ್ಥಿಕ ಆವರ್ತಗಳ ವಿವಿಧ ಹಂತಗಳನ್ನು ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿದೆ. ಈ ಚತ್ರದಲ್ಲಿ PS ಪೂರ್ಣೋದ್ಯೋಗದ ರೇಖೆಯಾಗಿದೆ. ಪೂರ್ಣೋದ್ಯೋಗಕ್ಕಿಂತ ಮೇಲೆ ವಿಸ್ತರಣೆ ಮತ್ತು ಹಿಂಜರಿತ ಎಂಬ ಎರಡು ಹಂತಗಳಿವೆ. ಪೂರ್ಣೋದ್ಯೋಗಕ್ಕಿಂತ ಕೆಳಗೆ ಮುಗ್ಗಟ್ಟು ಮತ್ತು ಚೇತರಿಕೆ ಎಂಬ ಎರಡು ಹಂತಗಳಿವೆ. ಪೂರ್ಣೋದ್ಯೋಗದ ಹಂತವನ್ನು ಉತ್ಕರ್ಷೆ ಎಂದು ಕರೆಯಲಾಗುತ್ತದೆ. ಈಗ ಆರ್ಥಿಕ ಆವರ್ತವೊಂದರ ವಿವಿಧ ಹಂತಗಳ ಲಕ್ಷಣಗಳನ್ನು ವಿಶ್ಲೇಷಿಸೋಣ.

೧. **ಕುಸಿತ (ಬಿಕ್ಕಟ್ಟು, Dipression):** ಈ ಹಂತದಲ್ಲಿ ವ್ಯಾಪಾರ ಮತ್ತು ಆರ್ಥಿಕ ಚಟುವಟಿಕೆಗಳು ಅತ್ಯಂತ ಕೆಳಗಿನ ಸ್ತರದಲ್ಲಿರುತ್ತವೆ, ಬೆಲೆಗಳು, ಕೂಲಿ, ಲಾಭ, ಬಡ್ಡಿ, ಗೇಣಿಗಳೆಲ್ಲವೂ ತುಂಬಾ ಕಡಿಮೆಯಾಗಿರುತ್ತವೆ. ಉತ್ಪಾದನೆ ಕುಂಠಿವಾಗಿ ಬೃಹತ್ಪ್ರಮಾಣದ ನಿರುದ್ಯೋಗ ಮತ್ತು ಉದ್ಯಮಗಳ ಅಪಯಶಸ್ಸು ತೀರಾ ಸಾಮಾನ್ಯವಾದ ಲಕ್ಷಣವಾಗಿರುತ್ತದೆ. ಎಲ್ಲಾ ಕಡೆ ನಿರಾಶೆ ಮತ್ತು ವಿಷಾದದ ಕರಾಳ ಛಾಯೆ ಪಸರಿಸುತ್ತದೆ. ಸಾಮಾನ್ಯವಾಗಿ ಸಮುದಾಯದ ಎಲ್ಲಾ ವರ್ಗಗಳ ಜನರು ಕಷ್ಟ ಕಾರ್ಪಣ್ಯಗಳಿಗೆ ಬಲಿಯಾಗುತ್ತಾರೆ. ಕೆಲವರು ಹೆಚ್ಚು ತೊಂದರೆಗೊಳಗಾದರೆ ಇನ್ನು ಕೆಲವರು ಸ್ವಲ್ಪ ಕಡಿಮೆ ತೊಂದರೆಗೊಳಗಾಗಬಹುದು. ಕೃಷಿಕರು ಉದ್ದಿಮೆದಾರರಿಗಿಂತ ಹೆಚ್ಚು ತೊಂದರೆಗೆ ಸಿಲುಕ್ಕುತ್ತಾರೆ. ಏಕೆಂದರೆ ಮುಗ್ಗಟ್ಟಿನ ಅವಧಿಯಲ್ಲಿ ಬೇಡಿಕೆ ತುಂಬಾ ಕಡಿಮೆಯಿರುತ್ತದೆ. ಬೇಡಿಕೆಗೆ ಪೂರೈಕೆಯನ್ನು ಕುಗ್ಗಿಸಲು ಕೃಷಿಕರಿಂದಾಗುವುದಿಲ್ಲ. ನಿರುದ್ಯೋಗದಿಂದಾಗಿ ಕಾರ್ಮಿಕ ವರ್ಗವು ತುಂಬಾ ತೊಂದರೆಗೊಳಗಾಗುತ್ತದೆ. ಒಟ್ಟಿನಲ್ಲಿ ಭವಿಷ್ಯತ್ತು ಅಂಧಕಾರಮಯವಾಗಿ ಎಲ್ಲರ ನಿರಾಶೆ ಕವಿದ ಮುಖದಲ್ಲಿ ಮುಂದೇನು ಎಂಬ ಪ್ರಶ್ನೆ ಅಚ್ಚೊತ್ತಿರುತ್ತದೆ.

**೨. ಚೇತರಿಕೆ (Revival):** ಸ್ವಲ್ಪ ಸಮಯ ಮುಗ್ಗಟ್ಟು ಕಳೆದ ಬಳಿಕ ಆರ್ಥಿಕ ದಿಗಂತದಲ್ಲಿ ಆಸೆಯ ಕಿರಣಗಳು ಮೂಡುತ್ತವೆ. ನಿರಾಶಾವಾದ ಮಾಯವಾಗಿ ಆಶಾವಾದಕ್ಕೆ ಎಡೆ ಮಾಡಿ ಕೊಡುತ್ತದೆ. ಆರ್ಥಿಕ ಚಟುವಟಿಕೆಗಳಲ್ಲಿ ನಿಧಾನವಾಗಿ ಚೇತರಿಕೆ ಉಂಟುಮಾಡುತ್ತದೆ. ಸರಕು ಮತ್ತು ಸೇವೆಗಳಿಗೆ ಬೇಡಿಕೆ ಅಧಿಕವಾಗುತ್ತದೆ. ಜೊತೆಯಲ್ಲೇ ಉತ್ಪಾದನೆ ಕೂಡಾ ಹೆಚ್ಚಾಗುತ್ತದೆ. ಉದ್ಯೋಗಾವಕಾಶ, ಆದಾಯ, ಬೆಲೆ, ವೇತನ, ಬಡ್ಡಿ, ಲಾಭ, ಇವು ನಿಧಾನವಾಗಿ ಏರಲಾರಂಬಿಸುತ್ತವೆ. ಹೂಟೆಯಲ್ಲಿ, ಬ್ಯಾಂಕಿನ ಸಾಲದಲ್ಲಿ, ಹಣದ ಚಲಾವಣೆಯಲ್ಲಿ ನಿಧಾನವಾಗಿ ಹೆಚ್ಚಳ ಉಂಟಾಗುತ್ತದೆ. ನಿರಾಶೆ

ಮತ್ತು ವಿಪ್ಪತ್ತುಗಳು ಮಾಯವಾಗಿ ಆಸೆಯ, ಉತ್ಸಾಹದ ವಾತಾವರಣ ಮೂಡುತ್ತದೆ. ಚೇತರಿಕೆಯು ಗುಣಕ ಮತ್ತು ವೇಗೋತ್ಕರ್ಷಗಳ ಪರಿಣಾಮದಿಂದ ವೇಗವಾಗಿ ಸಾಗುತ್ತದೆ. ಚೇತರಿಕೆ ಮುಂದುವರಿದಂತೆ ಆರ್ಥಿಕ ಚಟುವಟಿಕೆಗಳು ಮುಗ್ಗಟ್ಟಗಿಂತ ಮೊದಲಿದ್ದ ಹಂತಕ್ಕೆ ಬಂದು ಮುಟ್ಟುತ್ತವೆ. ಮುಗ್ಗಟ್ಟು ತೀವ್ರತರದ್ದಾಗಿದ್ದರೆ ಚೇತರಿಕೆಯ ವೇಗ ಕೂಡ ತೀವ್ರವಾಗುತ್ತದೆ. ಆವಿಷ್ಕಾರ, ಸರಕಾರದ ವೆಚ್ಚ, ಉತ್ಪಾದನಾ ತಂತ್ರದಲ್ಲಿ ಬದಲಾವಣೆ, ಹೊಸ ಕ್ಷೇತ್ರಗಳಲ್ಲಿ ಹೂಟಿ, ಹೊಸ ಶಕ್ತಿಯ ಮೂಲಗಳ ಶೋಷಣೆ, ಇತ್ಯಾದಿಗಳಿಂದ ಚೇತರಿಕೆಯ ವೇಗ ತೀವ್ರವಾಗುತ್ತದೆ. ವೇಗೋತ್ಕರ್ಷ ಮತ್ತು ಗುಣಕ ಪರಿಣಾಮಗಳಿಂದ ಆಥಿಕ ಚಟುವಟಿಕೆಗಳು ಒಮ್ಮೆಲೇ ಹೆಚ್ಚಾಗುತ್ತದೆ.

**೩.ಉತ್ಕರ್ಷ (Prosperity):** ಚೇತರಿಕೆ ಪೂರ್ಣೋದ್ಯೋಗದ ಹಂತದವರೆಗೆ ಸಾಗುತ್ತದೆ. ಪೂರ್ಣೋದ್ಯೋಗದ ಹಂತವೆಂದರೆ ಆರ್ಥಿಕ ಚಟುವಟಿಕೆಗಳ ಆದರ್ಶ ಹಂತ. ಇದನ್ನು ಉತ್ಕರ್ಷ ಎಂದು ಕರೆಯಲಾಗುತ್ತದೆ. ಉತ್ಪಾದನೆಯಲ್ಲಿ ಹೆಚ್ಚಳ, ಅಧಿಕ ಹೂಟಿ, ಸಾಲದ ವಿಸ್ತರಣೆ, ಅಧಿಕ ಲಾಭ, ಏರುವ ಬೆಲೆಗಳು, ವಿಪುಲ ಉದ್ಯೋಗಾವಕಾಶಗಳು ಉತ್ಕರ್ಷ ಹಂತದ ಲಕ್ಷಣಗಳು. ಈ ಅವಧಿಯಲ್ಲಿ ಆರ್ಥಿಕತೆಯಲ್ಲಿ ಒಂದು ರೀತಿಯ ಸ್ಥಿರತೆ ಇರುತ್ತದೆ. ಉದ್ದಿಮೆಗಳ ಉತ್ಕರ್ಷೆಯಿಂದಾಗಿ ಲಾಭ ಅಧಿಕವಾಗುತ್ತದೆ. ಹೂಟೆಗೆ ಇನ್ನಷ್ಟು ಉತ್ತೇಜನ ದೊರೆಯುತ್ತದೆ. ಉದ್ಯೋಗ, ವರಮಾನ ಮತ್ತು ಉತ್ಪನ್ನಗಳ ಆದರ್ಶ ಹಂತದಲ್ಲಿದ್ದು ಬೆಲೆ ಮತ್ತು ಕೂಲಿಗಳಲ್ಲಿ ಒಂದು ರೀತಿಯ ಸ್ಥಿರತೆ ಇರುವುದರಿಂದ ಉತ್ಕರ್ಷವನ್ನು ಪೂರ್ಣೋದ್ಯೋಗದ ಹಂತ ಎಂದು ಕರೆಯಲಾಗುತ್ತದೆ.

**೪. ವಿಸ್ತರಣೆ (ಉಬ್ಬರ ; Boom) :** ಉತ್ಕರ್ಷದ ನಂತರದ ಹಂತ ವಿಸ್ತರಣೆ ಅಥವಾ ಉಬ್ಬರ. ವಿಸ್ತರಣೆಯಲ್ಲಿ ಹಣದ ಚಲಾವಣೆ ಅತ್ಯಂತ ಅಧಿಕವಾಗಿರುವುದರಿಂದ ಈ ಹಂತವನ್ನು ಹಣದುಬ್ಬರ (Inflation) ಎಂದು ಕರೆಯಲಾಗುತ್ತದೆ. ಇದೊಂದು ತೀವ್ರವಾದ ಆರ್ಥಿಕ ಚಟುವಟಿಕೆಗಳ ವಿಸ್ತರಣೆಯ ಹಂತವಾಗಿರುತ್ತದೆ. ಉದ್ಯೋಗ ಆದರ್ಶ ಮಟ್ಟವನ್ನು ದಾಟುತ್ತದೆ. ಅಧಿಕ ಲಾಭದ ಆಸೆಯಿಂದ ಹೂಟೆ ಹೆಚ್ಚಾಗುತ್ತಾ ಹೋಗುತ್ತದೆ. ಆದರ್ಶ ಮಟ್ಟದ ಬಳಿಕವೂ ಹೂಟೆ ಏರುವುದರಿಂದ ಬೆಲೆಗಳು ಹೆಚ್ಚಾಗಿ ಅತಿ ಪ್ರಸರಣ ಉಂಟಾಗುತ್ತದೆ. ಉದ್ಯಮದಾರರಲ್ಲಿ ಆಶಾವಾದ ಅಧಿಕವಾಗುದರಿಂದ ಹೂಟೆ ಮತ್ತಷ್ಟು ಹೆಚ್ಚಾಗುತ್ತದೆ. ಈಗಲೇ ಪೂರ್ಣವಾಗಿ ಉಪಯೋಗಿಸಲ್ಪಡುವ ಉದ್ಯಮ ಘಟಕಗಳ ಬೆಲೆ ಏರುತ್ತದೆ. ಎಲ್ಲೆಲ್ಲೂ ಆಶಾವಾದದ ಹೊಂಗಿರಣಗಳೇ ಕಾಣಸಿಗುವುದರಿಂದ ಹೂಟೆ ಮಿತಿಮೀರಿ ಅಧಿಕವಾಗುತ್ತದೆ. ಉತ್ಪಾದನಾ ಘಟಕಗಳ ಅಭಾವವುಂಟಾಗಿ ಅವುಗಳ ಬೆಲೆ ಏರುತ್ತದೆ. ಆಗ ಉದ್ಯಮ ಸಾಹಸಿಗಳು ತಾವು ಅಪಾಯದ ಅಂಚಿನಲ್ಲಿದ್ದೇವೆಂದು ಭಾವಿಸಲಾರಂಭಿಸುತ್ತಾರೆ. ವಿಸ್ತರಣೆ ಅಧಿಕವಾಗಿ ಕೊನೆಗೆ ಆರ್ಥಿಕ ದಿಗಂತದಲ್ಲಿ ಕಷ್ಟಕಾರ್ಪಣ್ಯಗಳ ಕರಿ ಮೋಡಗಳು ಮುಸುಕಲಾರಂಭಿಸುತ್ತವೆ.

**೫. ಹಿಂಜರಿತ: (Recession):** ಅತಿಯಾದ ಆಶಾವಾದ ಒಮ್ಮೆಲೇ ನಿರಾಶಾವಾದಕ್ಕೆ ಎಡೆಮಾಡಿಕೊಡುತ್ತದೆ. ಇದರಿಂದಾಗಿ ಭಯ, ಸಂಶಯ ಮತ್ತು ಹಿನ್ನಡೆಗಳು ಉಂಟಾಗುತ್ತದೆ. ಬ್ಯಾಂಕುಗಳು ಉದ್ಯಮಗಳ ಸೋಲಿನ ಭೀತಿಯಿಂದ ಸಾಲ ಕೊಡುವುದನ್ನು ಕಡಿಮೆ ಮಾಡಲಾರಂಭಿಸುತ್ತವೆ. ವ್ಯಾಪಾರ ವಿಸ್ತರಣೆ ಮತ್ತು ಉತ್ಪಾದನೆಯ ಆದೇಶ ನಿಂತು ಹೋಗಿ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುತ್ತಾರೆ. ದ್ರವ್ಯದೊಲವು ಒಮ್ಮೆಲೆ ಅಧಿಕವಾಗಿ ಜನರು

ಬಂಡವಾಳ ಹೂಡುವ ಬದಲು ಹಣ ಬಚ್ಚಿಡುವುದನ್ನೇ ಹೆಚ್ಚು ಮೆಚ್ಚುತ್ತಾರೆ. ಗುಣಕ ಕ್ರಿಯೆಯಿಂದ ನಿರುದ್ಯೋಗ ಉಳಿದ ರಂಗಗಳಿಗೂ ಹಬ್ಬುತ್ತದೆ. ನಿರುದ್ಯೋಗದಿಂದ ಆದಾಯ, ವೆಚ್ಚ, ಬೆಲೆ. ಲಾಭ, ಔದ್ಯಮಿಕ ಮತ್ತು ವ್ಯಾವಹಾರಿಕ ಚಟುವಟಿಕೆಗಳು ಇಳಿಯಲಾರಂಭಿಸುತ್ತವೆ. ಹಣದ ಚಲಾವಣೆ ಈ ಕಾಲದಲ್ಲಿ ತುಂಬಾ ಕಡಿಮೆಯಿರುವುದರಿಂದ ಈ ಅವಧಿಯನ್ನು ಅನಪ್ರಸರಣ (deflation) ಎಂದು ಕರೆಯಲಾಗುತ್ತದೆ. ಹಿಂಜರಿತ ಸ್ವಲ್ಪವೇ ಸಮಯದಲ್ಲಿ ತನ್ನ ವೇಗ ಹೆಚ್ಚಿಸಿಕೊಮಡು ಕೊನೆಗೆ ಮುಗ್ಗಟ್ಟನ್ನು ಪ್ರವೇಶಿಸುತ್ತದೆ. ಇಲ್ಲಿಗೆ ಆರ್ಥಿಕ ವಟುವಟಿಕೆಗಳು ಒಂದು ವರ್ತುಲವನ್ನು ಮುಗಿಸುತ್ತವೆ.

ಆರ್ಥಿಕ ಚಟುವಟಿಕೆಗಳು ಇಲ್ಲಿಗೆ ನಿಲ್ಲಲಾರವು. ಮುಗ್ಗಟ್ಟಿನಿಂದ ಚೇತರಿಕೆ, ಚೇತರಿಕೆಯಿಂದ ಉತ್ಕರ್ಷ, ಉತ್ಕರ್ಷೆಯಿಂದ ವಿಸ್ತರಣೆ, ವಿಸ್ತರಣೆಯಿಂದ ಹಿಂಜರಿತ, ಹಿಂಜರಿತದಿಂದ ಮುಗ್ಗಟ್ಟು _______ ಹೀಗೆ ಆರ್ಥಿಕ ಚಟುವಟಿಕೆಗಳು ಮುಂದುವರಿಯುತ್ತಲೇ ಇರುತ್ತವೆ.

ಆರ್ಥಿಕ ಆವರ್ತಗಳ ವಿವಿಧ ಹಂತಗಳ ಕೆಲವು ವಿಶೇಷತೆಗಳನ್ನು ಕೆಳಗೆ ಕೊಡಲಾಗಿದೆ:

೧. ಚೇತರಿಕೆಯ ವಿಧಾನವು ಸಾಮಾನ್ಯವಾಗಿ ನಿಧಾನವಾಗಿರುತ್ತದೆ. ಆದರೆ ಒಮ್ಮೆ ವೇಗ ಸಿಕ್ಕಿಬಿಟ್ಟೆತೆಂದರೆ ಮತ್ತೆ ತೀವ್ರ ವೇಗದಲ್ಲಿ ಮುಂದುವರಿಯುತ್ತದೆ.
೨. ವಿಸ್ತರಣದ ಅವಧಿಯು ಬಹಳ ಎತ್ತರದ ಮಟ್ಟದ ಆರ್ಥಿಕ ಚಟುವಟಿಕೆಗಳಿಂದ ಗುರುತಿಸಲ್ಪಡುತ್ತದೆ.
೩. ವಿಸ್ತರಣಾ ಹಂತ ಮುಗಿಯುವುದು ಬಹಳ ವೇಗವಾಗಿ ಮತ್ತು ತೀಕ್ಷ್ಣವಾಗಿ.
೪. ಆವರ್ತದ ಕೆಳಬಾಗುವಿಕೆ ಬಹಳ ತೀವ್ರವಾಗಿರುತ್ತದೆ.
೫. ಮುಗ್ಗಟ್ಟುನ ಅವಧಿಯು ದೀರ್ಘವಾಗಿ ತುಂಬಾ ನೋವುಂಟುಮಾಡುತ್ತದೆ. ಆಗ ಯಾವ ವರ್ಗಕ್ಕೂ ಪ್ರಯೋಜವಿರುವುದಿಲ್ಲ. ಎಲೆಲ್ಲೂ ನಿರುದ್ಯೋಗವಿದಗದು ನಿರಾಶೆ ಎಲ್ಲರ ಮುಖಗಳಲ್ಲಿ ಅಚೊತ್ತಿರುತ್ತದೆ.

**<u>ವ್ಯಾಪಾರ ಚಕ್ರದ ಹತೋಟಿ:</u>**

ಆರ್ಥಿಕ ಚಟುವಟಿಕೆಗಳ ಏರಿಳಿತಗಳಿಂದ ಆರ್ಥಿಕ ಸ್ಥಿರತೆ ಇಲ್ಲದಾಗಿ ಆರ್ಥಿಕ ಪ್ರಗತಿಗೆ ತೊಂದರೆಯಾಗುತ್ತದೆ. ಆದುದರಿಂದ ವ್ಯಾಪಾರ ಚಕ್ರವನ್ನು ಹತೋಟಿಯಲ್ಲಿಡಬೇಕು. ಇಲ್ಲದಿದ್ದರೆ ಆರ್ಥಿಕ ಪ್ರಗತಿ ಅಸಾಧ್ಯ. ವ್ಯಾಪಾರ ಚಕ್ರಗಳನ್ನು ಹತೋಟಿಯಲ್ಲಿಡಲು ಮೂರು ವಿಧಾನಗಳಿವೆ:

೧. ಹಣಕಾಸಿನ ನೀತಿ
೨. ಖಜಾನೆ ನೀತಿ
೩. ನೇರ ಹತೋಟಿ ಕ್ರಮಗಳು

೧. **<u>ಹತೋಟಿಯ ನೀತಿ (Monetary Policy):</u>** ಆರ್ಥಿಕ ಆವರ್ತಗಳನ್ನು ಹತೋಟಿಯಲ್ಲಿಟ್ಟು ಬೆಲೆಯಲ್ಲಿ ಸ್ಥಿರತೆ ಕಾಯ್ದು ಕೊಳ್ಳಲು ಹಣಕಾಸಿನ ನೀತಿ ಒಂದು ಪರಿಣಾಮಕಾರಿ ಕ್ರಮವಾಗಿದೆ. ಹಣಕಾಸಿನ ನೀತಿಯು ದೇಶದ ಕೇಂದ್ರ ಬ್ಯಾಂಕಿನ ಮೂಲಕ ಅಂದರೆ ಹಣದ ಅಧಿಕಾರಿಗಳ ಮೂಲಕ,

ಕಲಸ ಮೂಡುತ್ತದೆ. ಆರ್ಥಿಕ ಆವರ್ತಗಳನ್ನು ಹತೋಟಿಗೆ ತರಲು ಈ ಕೆಳಗಿನ ಹಣಕಾಸಿಗೆ ಸಂಬಂಧಿಸಿದ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ: ೧. ಮುಗ್ಗಟ್ಟಿನ ಸಮಯದಲ್ಲಿ ಅಗ್ಗದ ಹಣದ ನೀತಿಯನ್ನು ಅನುಸರಿಸುವುದು: ಅಂದರೆ ಬಡ್ಡಿಯ ದರವನ್ನು ಇಳಿಸಿ, ಬ್ಯಾಂಕುಗಳು ಹೆಚ್ಚು ಹಣವನ್ನು ಸಾಲ ನೀಡಿ, ಹೂಟೆಗೆ ಉತ್ತೇಜನ ನೀಡುವುದು.. ೨. ಅತಿಪ್ರಸರಣದ ಅವಧಿಯಲ್ಲಿ ತುಟ್ಟಿ ಹಣದ ನೀತಿಯನ್ನು (dear money policy) ಅನುಸರಿಸುವುದು. ಅಂದರೆ ಬಡ್ಡಿಯ ದರವನ್ನು ಹೆಚ್ಚಿಸಿ ಸಾಲದ ಸೌಲಭ್ಯಗಳನ್ನು ಕಡಿಮೆ ಮಾಡಿ ಹೂಟೆಗೆ ಉತ್ತೇಜನ ದೊರಕದಂತೆ ಮಾಡುವುದು. ೩. ಸಾಲ ರೂಪದ ಹಣದ ಗಾತ್ರ ನಿಯಂತ್ರಣದ ಕ್ರಮಗಳನ್ನು ಕೈಗೊಳ್ಳುವುದು. ಈ ಕ್ರಮಗಳು ತೆರೆದ ಪೇಟೆಯ ವ್ಯವಹಾರ ನೀತಿ, ಬದಲಾಗುವ ಬೆಂಬಲ ಹಣದ ಪ್ರಮಾಣ ವಿಧಾನ, ಬ್ಯಾಂಕ್‌ದರ ಮೊದಲಾದವುಗಳನ್ನು ಒಳಗೊಂಡಿರುತ್ತದೆ. ೪. ಸಾಲ ರೂಪದ ಹಣದ ಗುಣ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದು.

೨. **ಖಜಾನೆ ನೀತಿ (Fiscal Policy):** ಸರ್ಕಾರವು ವ್ಯಾಪಾರ ಚಕ್ರಗಳನ್ನು ಖಜಾನೆ ನೀತಿಯಿಂದ ಹತೋಟಿಯಲ್ಲಿಡಲು ಯತ್ನಿಸುತ್ತದೆ. ಖಜಾನೆ ನೀತಿಯಲ್ಲಿ ಅನುಸರಿಸುವ ಕ್ರಮಗಳಿವು: ಅ. ತೆರಿಗೆ ವಿಧಾನ. ಆ. ಸಾರ್ವಜನಿಕ ಸಾಲ. ಇ. ಸಾರ್ವಜನಿಕ ವೆಚ್ಚ. ಈ. ಕೊರತೆ ಹಣಕಾಸಿನ ವಿಧಾನ.

೩. **ನೇರ ಕ್ರಮಗಳು (Direct control):** ಹಣಕಾಸಿನ ನೀತಿ, ಖಜಾನೆ ನೀತಿಗಳಲ್ಲದೆ ಸರಕಾರ ಆರ್ಥಿಕ ಸ್ಥಿರತೆಗಾಗಿ ಕೆಳಗಿನ ನೇರ ಕ್ರಮಗಳನ್ನು ಕೈಗೊಳ್ಳಬಹುದು: ೧. ಬೆಲೆಯ ನಿಯಂತ್ರಣ ಮಾಡುವುದು. ೨. ಬೆಲೆ ಬೆಂಬಲ ನೀತಿಯ ಅನುಷ್ಠಾನ. ೩. ಪಡಿತರ ಪದ್ಧತಿಯನ್ನು ಜಾರಿಗೆ ತರುವುದು. ೪. ನಿರುದ್ಯೋಗ ಭತ್ಯೆ ನೀಡಿಕೆ.

ಆರ್ಥಿಕ ಆವರ್ತಗಳನ್ನು ಪೂರ್ತಿಯಾಗಿ ಹತೋಟಿಯಲ್ಲಿಡಬಲ್ಲ ಕ್ರಮಗಳು ಇಲ್ಲವೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಕಾರ್ಲ್‌ಮಾರ್ಕ್ಸ್ ಬಂಡವಾಳಶಾಹಿ ಆರ್ಥಿಕತೆಯಲ್ಲಿ ಆರ್ಥಿಕ ಅವರ್ತಗಳು ಅನಿವಾರ್ಯವೆಂದೂ ಆರ್ಥಿಕ ಸ್ಥಿರತೆ ಸಾಧಿಸಬೇಕಾದರೆ ಸಮಾಜವಾದವನ್ನು ಅನುಷ್ಠಾನಕ್ಕೆ ತರುವುದು ಏಕೈಕ ಮಾರ್ಗವೆಂದೂ ಹೇಳುತ್ತಾನೆ ವ್ಯಾಪಾರ ಚಕ್ರಗಳಿಗೆ ಕಾರಣಗಳನ್ನು ಕಂಡು ಹಿಡಿಯಲು ಬಹಳ ಕಾಲದಿಂದಲೇ ಪ್ರಯತ್ನಿಸಲಾಗಿದೆ. ಹವಾಮಾನದ ಬದಲಾವಣೆಯಿಂದ ಆರ್ಥಿಕ ಆವರ್ತಗಳುಂಟಾಗುತ್ತಿದ್ದವೆಂದ ಬಹಳ ಹಿಂದೆ ಅರ್ಥಶಾಸ್ತ್ರಜ್ಞರು ಭಾವಿಸಿದ್ದರು. ಡಗ್ಲಾರ್ ಮತ್ತು ಹಾಬ್ಸನ್ ಅನುಭೋಗದ ಕೊರತೆಯಿಂದ ಆರ್ಥಿಕ ಆವರ್ತಗಳುಂಟಾಗುತ್ತವೆಯೆಂದು ಹೇಳಿದ್ದಾರೆ. ಆವಿಷ್ಕಾರದಿಂದಾಗಿ ಆರ್ಥಿಕ ಆವರ್ತಗಳುಂಟಾಗುತ್ತವೆಂದು ಶುಂಪೀಟರನ ಅಭಿಪ್ರಾಯ. ಪಿಗೂನ ಅಭಿಪ್ರಾಯದಲ್ಲಿ ಕೈಗಾರಿಕೋದ್ಯಮಿಗಳ ಮತ್ತು ವಾಣಿಜ್ಯೋದ್ಯಮಿಗಳ ಆಶಾಭಾವನೆಯಿಂದ ಬಂಡವಾಳ ಹೂಡಿಕೆ ಅಧಿಕವಾಗುತ್ತದೆ. ಕಾಲ ಕ್ರಮೇಣ ಮುಗ್ಗಟ್ಟು ತಲೆದೋರುತ್ತದೆ. ಹಾಟ್ರೆಯ ಪ್ರಕಾರ ಆರ್ಥಿಕ ಆವರ್ತಗಳಿಗೆ ಕಾರಣ ಹಣದ ಪೂರೈಕೆಯಲ್ಲಿನ ಏರಿಳಿತಗಳು. ಹೇಯಕನ ದೃಷ್ಟಿಯಲ್ಲಿ ಹೂಟೆ ಮಿತಿ ಮೀರುವುದರಿಂದ ಆರ್ಥಿಕ ಆವರ್ತಗಳು ಕಾಣಿಸಿಕೊಳ್ಳುತ್ತವೆ. ಕೇನ್ಸನ ಅಭಿಪ್ರಾಯದಲ್ಲಿ ಆದಾಯ ಮತ್ತು ಅನುಭೋಗ ವೆಚ್ಚಗಳ ಅಂತರದಿಂದಾಗಿ ಆರ್ಥಿಕ ಏರಿಳಿತಗಳು ಉಂಟಾಗುತ್ತವೆ. ಇತ್ತೀಚೆಗೆ ಆಧುನಿಕ ಅರ್ಥಶಾಸ್ತ್ರಜ್ಞರು ಗುಣಕ ಮತ್ತು ವೇಗೋತ್ಕರ್ಷಗಳ ಜಂಟಿ ಕಾರ್ಯ ನಿರ್ವಹಣೆಯಿಂದ ಆಧುನಿಕ ಸಿದ್ಧಾಂತವೊಂದನ್ನು ರಚಿಸಿದ್ದಾರೆ. ಈ ನವೀನ ಸಿದ್ಧಾತವು ಉಳಿದೆಲ್ಲಾ ಸಿದ್ಧಾಂತಗಳಿಗಿಂತ ವೈಜ್ಞಾನಿಕವೂ, ಪರಿಪೂರ್ಣವೂ ತೃಪ್ತಿದಾಯಕವೂ ಆಗಿದೆ.